**ಒಂದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 1ನೇ ಅವಧಿ | 10 ನಿ | ಕನ್ನಡ – ಪದ ಓದು ಅಕ್ಷರ ಬರಿ ಹಂತ 2, 3, 4 | ವರ್ಣಮಾಲೆಯ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವುದು ಓದುವುದು ಮತ್ತು ಬರೆಯುವುದು. | ಮಿಂಚು ಪಟ್ಟಿಗಳು | ಶಿಕ್ಷಕರು | ಪೂ.ಸಿ.ಚ.<br>"ನನ್ನ ಸ್ಲೇಟು ಕರಿಯದು" ಎಂಬ ಅಭಿನಯ ಗೀತೆಯನ್ನು ಹಾಡುವರು. |
| | 30 ನಿ | | | | ಶಿಕ್ಷಕರು | ಹಂತ 3 ರಲ್ಲಿನ 3 ಅಕ್ಷರಗಳನ್ನು ಪರಿಚಯಿಸುವರು. (ಪ.ಯ.ಉ)<br>ಕಪ್ಪು ಹಲಗೆಯ ಮೇಲೆ ಈ ಅಕ್ಷರಗಳನ್ನು ಬರೆಯುವ ಕ್ರಮ ಪರಿಚಯಿಸುವರು. ಮಿಂಚು ಪಟ್ಟಿಗಳನ್ನು ತೋರಿಸಿ ಉಚ್ಚಾರಣೆಯನ್ನು ಹೇಳಿಕೊಡುವರು. |
| | 10 ನಿ | | | ಮಿಂಚುಪಟ್ಟಿಗಳು | ಶಿಕ್ಷಕರು | ಅಕ್ಷರಗಳನ್ನು ಬರೆಯಲು ಸೂಚನೆಗಳನ್ನು ಕೊಡುವರು. |
| | 30 ನಿ | | | | ಹಿರೇಮಣಿ | ಸ್ಲೇಟಿನ ಮೇಲೆ ಅಕ್ಷರಗಳನ್ನು ಮಕ್ಕಳು ತಿದ್ದುವರು, ಮಿಂಚು ಪಟ್ಟಿಗಳನ್ನು ಬಳಸಿ ಪದಗಳನ್ನು ರಚಿಸುವರು.<br>ಪ, ಯ, ಉ<br>ಹಿಂದಿನ ಅವಧಿಯಲ್ಲಿ ಕಲಿತ ಅಕ್ಷರಗಳನ್ನು ಪುನರ್ಬಲಿಸುವರು.<br>ಉದಾ :– ಮಜ, ವರ, ಜರ, ಮರ, ಮಗ, ರಜ, |
| 2ನೇ ಅವಧಿ | 10 ನಿ | ಗಣಿತ – ಸಂಕಲನ | ಮೊತ್ತ 9 ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತು ಬಳಸಿ ಸಂಕಲನ ಮಾಡುವರು. | ಅಂಕಿಗಳ ಮಿಂಚು ಪಟ್ಟಿಗಳು ಡಾಮಿನೋ ಕಾರ್ಡ್‌ಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>2 ನೆಯ ತರಗತಿಯ ಮಕ್ಕಳ ಜೊತೆ ದನಿ ಗೂಡಿಸುವರು. |
| | 30 ನಿ | | | | ಹಿರೇಮಣಿ | ಅಂಕಿಗಳ ಮಿಂಚು ಪಟ್ಟಿಗಳನ್ನು ಮತ್ತು ವಸ್ತುಗಳನ್ನು ಕೊಟ್ಟು ಹಿರೇಮಣಿಯ ಸಹಾಯದಿಂದ ಸಂಕಲನ ಮಾಡಲು ಸೂಚಿಸುವರು.<br>ಉದಾ :– 00 0 000<br>2 + 1 = 3 |
| | 10 ನಿ | | + ಮತ್ತು = ಚಿಹ್ನೆ ಪರಿಚಯ | ಕಡ್ಡಿಗಳು, ಪೆನ್ಸಿಲ್‌ಗಳು, +, = ಚಿಹ್ನೆಗಳ ಮಿಂಚು ಪಟ್ಟಿಗಳು | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು.<br>ಎರಡು ಕಡ್ಡಿಗಳನ್ನು ಬಳಸಿ ದೊಡ್ಡದು ಚಿಕ್ಕದು ಗುರ್ತಿಸಲು ಹೇಳುವರು. ಇದೇ ರೀತಿ ರಟ್ಟಿನ ಪಟ್ಟಿಗಳು, ಪೆನ್ಸಿಲ್‌ಗಳನ್ನು ಬಳಸಿ ಪುನರಾವರ್ತಿಸುವರು. |
| | 30 ನಿ | | | | ಶಿಕ್ಷಕರು | ನಂತರ ಸಮನಾಗಿರುವವನ್ನು ತೆಗೆದುಕೊಂಡು ಗುರ್ತಿಸಲು ಹೇಳುವರು. ಎರಡೂ ಸಮ ಎಂದು ತಿಳಿಯುವರು.<br>+, = ಚಿಹ್ನೆ ಪರಿಚಯಿಸಿ ಬರೆಯುವ ಕ್ರಮ ತಿಳಿಸುವರು. |

**ಎರಡನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 1ನೇ ಅವಧಿ | 10 ನಿ | ಕನ್ನಡ – ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು | ಶಿಶುಗೀತೆಗಳ ಪುಸ್ತಕ | ಶಿಕ್ಷಕರು | ಪೂ.ಸಿ.ಚ.<br>1 ನೇ ತರಗತಿಯವರೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು.<br>ಶಿಕ್ಷಕರು ಮಕ್ಕಳಿಗೆ ಹಾಡುಗಳನ್ನು ಹೇಳಲು ಅಗತ್ಯ ಸೂಚನೆಗಳನ್ನು ನೀಡುವರು |
| | 30 ನಿ | | | | ಹಿರೇಮಣಿ | ಹಿಂದಿನ ಅವಧಿಗಳಲ್ಲಿ ಕಲಿತ ಹಾಡುಗಳನ್ನು ಸಾಮೂಹಿಕವಾಗಿ ಮತ್ತು ವೈಯಕ್ತಿಕವಾಗಿ ಹಾಡುವರು. |
| | 10 ನಿ | | | | ಶಿಕ್ಷಕರು | |
| | 30 ನಿ | | | | ಶಿಕ್ಷಕರು | "ಬಾ ಬಾ ಗಿಳಿಯೆ ಬಣ್ಣದ ಗಿಳಿಯೆ. . . ." ಹಾಡು ಹೇಳಿ ಕೊಡುವರು.<br>ಗಿಳಿಯ ಚಿತ್ರ ತೋರಿಸುತ್ತಾ ಮಕ್ಕಳಿಗೆ ಹಾಡಲು ಪ್ರೇರೇಪಿಸುವರು. |
| 2ನೇ ಅವಧಿ | 10 ನಿ | ಗಣಿತ – ಸಂಕಲನ | ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಅಭಿನಯಗೀತೆ, ಸಮಸ್ಯಾ ಲೆಕ್ಕಗಳ ಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಸುವ್ವಿ ಸುವ್ವಿ ಸುವ್ವಾಲೆ/ಮರದ ಮೇಲೆ ಮೂರು ಕಾಗೆ ದಡದ ಮೇಲೆ ಆರು ಕಾಗೆ ಒಟ್ಟು ಎಷ್ಟೆಂದು ನೀ ಹೇಳೇ ?" ಈ ಅಭಿನಯ ಗೀತೆ ಹೇಳಿ ಕೊಡುವರು. |
| | 30 ನಿ | | | | ಶಿಕ್ಷಕರು | ಸಮಸ್ಯಾ ಲೆಕ್ಕಗಳನ್ನು ಬಿಡಿಸುವ ಕ್ರಮ ತಿಳಿಸಿ ಕೊಡುವರು. ಒಂದು ಗೋಣಿ ಚೀಲದಲ್ಲಿ 10 ತೆಂಗಿನ ಕಾಯಿಗಳಿವೆ, ಇನ್ನೊಂದು ಗೋಣಿ ಚೀಲದಲ್ಲಿ 18 ತೆಂಗಿನ ಕಾಯಿಗಳಿವೆ, ಒಟ್ಟು ಎಷ್ಟು ತೆಂಗಿನ ಕಾಯಿಗಳಿವೆ ? ಬಿಡಿಸುವ ಕ್ರಮ :–<br>ಒಂದು ಚೀಲದಲ್ಲಿದ್ದ ಕಾಯಿಗಳು 10<br>ಇನ್ನೊಂದು ಚೀಲದಲ್ಲಿದ್ದ ಕಾಯಿಗಳು + 18<br>ಒಟ್ಟು 28<br>ಇದೇ ರೀತಿ ವಿವರಣೆ ಇರುವ ಸಮಸ್ಯಾತ್ಮಕ ಲೆಕ್ಕಗಳನ್ನು ಮಾಡಿಸುವರು. |
| | 10 ನಿ | ಲಲಿತ ಕಲೆ | ವಿವಿಧ ರೀತಿಯ ಚಿತ್ರಗಳನ್ನು, ಹಾಗು ಬಣ್ಣಗಳ ಪರಿಕಲ್ಪನೆಯನ್ನು, ತಿಳಿಯುವ ಸಾಮರ್ಥ್ಯವನ್ನು ಹೊಂದುವುದು. | ಬಣ್ಣ ರಹಿತ ಚಿತ್ರಗಳು, ಬಣ್ಣದ ಪೆನ್ಸಿಲ್‌ಗಳು | ಶಿಕ್ಷಕರು | ಶಿಕ್ಷಕರು ವಿತರಿಸಿರುವ ಚಿತ್ರಕ್ಕೆ ಅನುಗುಣವಾಗಿ ಚಿತ್ರಗಳಿಗೆ ಬಣ್ಣ ತುಂಬಲು ಸೂಚಿಸುವರು.<br>ಉದಾ :– ನವಿಲು, ಜಿಂಕೆ, ತೆಂಗಿನ ಮರ, ಕುದುರೆ, ಆನೆ, ಚಿಟ್ಟೆ, ಕಮಲ, ದಾಸವಾಳ ಹೂ ಇತ್ಯಾದಿ. |
| | 30 ನಿ | | | | ಹಿರೇಮಣಿ | ಮಕ್ಕಳು ಚಿತ್ರಗಳಿಗೆ ಸೂಕ್ತ ಬಣ್ಣ ಹಚ್ಚುವರು. |

**ಐದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 1ನೇ ಅವಧಿ | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| 2ನೇ ಅವಧಿ | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 3ನೇ ಅವಧಿ | 10ನಿ | ಮೌಲ್ಯ ಶಿಕ್ಷಣ | | ನೀತಿಕಥೆಯ ಚಿತ್ರಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಬಾ ಬಾ ಗಿಳಿಯೆ........." ಅಭಿನಯ ಗೀತೆ ಹಾಡಿಸುವರು | ಮೌಲ್ಯ ಶಿಕ್ಷಣ | – | ನೀತಿ ಕಥೆಗಳ ಚಿತ್ರಗಳು | ಶಿಕ್ಷಕರು | **ಪೂ. ಸಿ.ಚ.**<br>ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | ಕನ್ನಡ – ಮಲೆನಾಡ ಸಿರಿ ಜಲಪಾತ | ಅಪರಿಚಿತ ಸನ್ನಿವೇಶಗಳನ್ನು ಸಂಭಾಷಣೆ, ಸಂವಾದ, ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು. | ಪಠ್ಯ ಪುಸ್ತಕ | ಶಿಕ್ಷಕರು | ಹಿರೇಮಣಿಯು ಶಿಕ್ಷಕರು ಕೊಟ್ಟ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಾನೆ.<br>ಭಾಷಾಭ್ಯಾಸ ಚಟುವಟಿಕೆಗಳನ್ನು ಮಾಡಲು ಮಕ್ಕಳಿಗೆ ಸೂಚನೆಗಳನ್ನು ನೀಡುವರು. |
| | 30ನಿ | | | | ಶಿಕ್ಷಕರು | “ಕಾಗೆ ಮತ್ತು ಹಾವು” ನೀತಿಕಥೆಯನ್ನು ಚಿತ್ರ ಬಳಸಿ ಹೇಳುವರು.<br>“ಬಾತುಕೋಳಿಗಳು ಮತ್ತು ಆಮೆ” ಕಥೆಯನ್ನು ಚಿತ್ರ ಬಳಸಿ ಹೇಳುವರು. | | | | ಶಿಕ್ಷಕರು | “ಕಾಗೆ ಮತ್ತು ಹಾವು” ನೀತಿಕಥೆಯನ್ನು ಆಲಿಸುವರು.<br>“ಆಮೆ ಮತ್ತು ಬಾತುಕೋಳಿಗಳು” ಕಥೆಯನ್ನು ಆಲಿಸುವರು.<br>ಚಿತ್ರ ತೋರಿಸಿ ಕಥೆ ಹೇಳುವರು. | | | | ಹಿರೇಮಣಿ | ಹೊಸ ಪದಗಳ ಅರ್ಥ ಬರೆದು ಬಾಯಿಪಾಠ ಮಾಡುವರು. ಗಮನಿಸಿ ತಿಳಿಯಲ್ಲಿನ ಪದಗಳನ್ನು ಓದಿ ತಿಳಿಯುವರು. ಪ್ರಶ್ನೆಗಳಿಗೆ ಉತ್ತರ ಬರೆಯುವರು. |
| | 10ನಿ | ಕನ್ನಡ – ಪದ ಓದು ಅಕ್ಷರ ಕಲಿ ಹಂತ 2, 3, 4 | ವರ್ಣಮಾಲೆಯ ಅಕ್ಷರಗಳನ್ನು ಒಟ್ಟಾಗಿ ಮತ್ತು<br>ಓದುವುದು<br>ಬರೆಯುವುದು. ಬಿಡಿಯಾಗಿ ಗುರ್ತಿಸುವುದು | ಅಕ್ಷರಗಳ ಮಿಂಚು ಪಟ್ಟಿ | ಶಿಕ್ಷಕರು | ಮಕ್ಕಳು ಕಾರ್ಯವನ್ನು ಪರಿಶೀಲಿಸುವರು.<br>ಪದಗಳ ಕಾರ್ಡ್ ಓದಿಸುವರು. | ಸಾ.ಉ.ಉ.ಕಾ. | ಆಕೃತಿಗಳ ರಚನೆ ಮಾಡುವ ಸಾಮರ್ಥ್ಯವನ್ನು ಹೊಂದುವುದು. | ರಟ್ಟು, ಕತ್ತರಿ, ಹಾಳೆ, ಕೆಲವು ಮಾದರಿಗಳು | ಶಿಕ್ಷಕರು | ಶಿಕ್ಷಕರು ವಿವಿಧ ರೀತಿಯ ಆಕೃತಿಗಳನ್ನು ರಟ್ಟಿನಿಂದ ತಯಾರಿಸಲು ಸೂಚನೆ ನೀಡುವರು, ಮಕ್ಕಳು ಅನುಸರಿಸುವರು.<br>ಉದಾ :–  | | ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು. ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. | ಭಾಷಾಭ್ಯಾಸ ಚಟುವಟಿಕೆಗಳ ಪುಸ್ತಕ | ಶಿಕ್ಷಕರು | ಮಕ್ಕಳ ಕಾರ್ಯವನ್ನು ಪರಿಶೀಲಿಸುವರು. |
| | 30ನಿ | | | | ಹಿರೇಮಣಿ | ಹಂತ 1 ಮತ್ತು 2ರ ಅಕ್ಷರಗಳಿಂದಾಗುವ ಪದಗಳ ಕಾರ್ಡ್ ಕೊಟ್ಟು ಎಲ್ಲರಿಂದಲೂ ಓದಿಸಲು ಸೂಚಿಸುವರು. | | | | ಹಿರೇಮಣಿ | ಮಕ್ಕಳು ಆಕೃತಿಗಳನ್ನು ರಟ್ಟಿನಿಂದ ತಯಾರಿಸುವರು. | | | | ಶಿಕ್ಷಕರು | ಪದಗಳಿಗೆ ವಾಕ್ಯ ರಚನೆ ಮಾಡುವ ಕ್ರಮವನ್ನು ಮಕ್ಕಳಿಗೆ ತಿಳಿಸಿ ಕೊಡುವರು, ವಾಕ್ಯ ರಚನೆಯ ನಿಯಮಗಳನ್ನು ತಿಳಿಸುವರು.<br>ಪ್ರೇಕ್ಷಣೀಯ, ಐತಿಹಾಸಿಕ, ರಮಣೀಯ ಇತ್ಯಾದಿ ಪದಗಳಿಗೆ ಪ್ರತಿ ಮಗುವಿನಿಂದಲೂ ವಾಕ್ಯ ರಚನೆ ಮಾಡಿಸುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆಯನ್ನು ಗ್ರಹಿಸುವರು. | | ಶಿಕ್ಷಕರು | **ಪೂ. ಸಿ.ಚ.**<br>“ಬೇಕೆ ಬೇಕು ಆಹಾರ, ತಿನ್ನಲು ಬೇಕು ಶಕ್ತಿಗೆ ಬೇಕು ಆಹಾರ ಬೆಳೆಯಲು ಬೇಕು ಆಹಾರ” ಎಂಬ ಹಾಡನ್ನು ಹೇಳಿಕೊಡುವರು. | ಪರಿಸರ ಅಧ್ಯಯನ – ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಹಾಡು, ಎಡಗೈ ಚಿತ್ರ | ಶಿಕ್ಷಕರು | **ಪೂ. ಸಿ.ಚ.**<br>1 ನೇ ತರಗತಿಯ ಮಕ್ಕಳೊಂದಿಗೆ ಆಹಾರದ ಬಗ್ಗೆ ಇರುವ ಹಾಡನ್ನು ಕಲಿಯುವರು. | ವಿಜ್ಞಾನ – ವಿವಿಧ ಭೂ ಸ್ವರೂಪಗಳಲ್ಲಿ ಸಸ್ಯಪ್ರಾಣಿ ಮತ್ತು ಜನರ ಜೀವನ | ವಿವಿಧ ಭೂ ಸ್ವರೂಪಗಳಲ್ಲಿ ಕಂಡು ಬರುವ ವಿವಿಧ ಸಸ್ಯವರ್ಗದ ವಿಧಗಳನ್ನು ತಿಳಿಯುವರು. | ಪನರಾವರ್ತನೆ, ಪರ್ವತಗಳ ಇಳಿಜಾರುಗಳು, ಲಾಮಾ, ಯಾಕ್, ಪರ್ವತ ಮೇಲೆ ಹಿಮ, ಪಾಂಡಾ ಇವುಗಳ ಚಿತ್ರಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿತ ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಸೂಚನೆಯನ್ನು ನೀಡುವರು.<br>ಹಿರೇಮಣಿಯ ಸಹಾಯದಿಂದ ಬದನೆ, ಬಾಳೆ, ದ್ರಾಕ್ಷಿ ಹಣ್ಣಿನ ಚಿತ್ರಗಳನ್ನು ಬರೆಯಲು ತಿಳಿಸುವರು.<br>ಮಕ್ಕಳು ಚಿತ್ರಗಳನ್ನು ಬರೆಯುವರು. | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಸೂಚನೆಯನ್ನು ನೀಡುವರು.<br>ಮಕ್ಕಳ ಎಡಗೈಯನ್ನು ನೆಲದ ಮೇಲೆ ಇರಿಸಿ ಮುಂಗೈ ಚಿತ್ರವನ್ನು ಬಳಸಿ ಬೆರಳುಗಳನ್ನು ಗುರುತಿಸಲು ಹೇಳುವರು. ಮಕ್ಕಳು ಹಿರೇಮಣಿ ಸಹಾಯದಿಂದ ಎಡಗೈನ ಮುಂಗೈ ಚಿತ್ರ ಬರೆಯಲು ತೊಡಗುವರು ಮತ್ತು ಎಲ್ಲರೂ ಬಹಳ ಸುಲಭವಾಗಿ ಚಿತ್ರ ರಚನೆಯನ್ನು ಮಾಡುವರು. | | | | ಶಿಕ್ಷಕರು | * ಪರ್ವತಗಳ ಮೇಲ್ಭಾಗದಲ್ಲಿನ ಹವಾಗುಣದ ಬಗ್ಗೆ ತಿಳಿಸಿ ಅಲ್ಲಿನ ಸಸ್ಯಗಳು ಮತ್ತು ಪ್ರಾಣಿಗಳ ಬಗ್ಗೆ ಚಿತ್ರ ತೋರಿಸಿ ಚರ್ಚಿಸುವರು.<br>* ಹಾಗೆಯೇ ಇಳಿಜಾರುಗಳಲ್ಲಿರುವ ಕಾಡುಗಳು ಮತ್ತು ಅಲ್ಲಿರುವ ಪ್ರಾಣಿಗಳ ಬಗ್ಗೆ ಚರ್ಚೆ ಮಾಡುವರು.<br>* ಪರ್ವತಗಳು ಮತ್ತು ಬೆಟ್ಟಗಳ ಇಳಿಜಾರುಗಳಲ್ಲಿ ವಾಸಿಸುವ ಜನರ ಜೀವನ, ಸಾಕುವ ಪ್ರಾಣಿಗಳು ಮತ್ತು ಬೆಳೆಯುವ ಬೆಳೆಗಳ ಬಗ್ಗೆ ವಿವರಣೆ ನೀಡುವರು. |
| | 10ನಿ | | | ಸ್ವಚ್ಛತೆ ಪ್ರೀತಿ, ಸ್ನೇಹ, ಇವುಗಳನ್ನು ತೋರಿಸುವ ಚಿತ್ರಪಟಗಳು ಹಾಗೂ ಮಿಂಚು ಪಟ್ಟಿಗಳು. | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. | ಸಾ.ಉ.ಉ.ಕಾ. | ವಿವಿಧ ರೀತಿಯ ಆಕೃತಿಗಳ ಪರಿಚಯ ಮತ್ತು ಬಣ್ಣಗಳ ಕಲ್ಪನೆ ಸಾಮರ್ಥ್ಯವನ್ನು ಹೊಂದುವುದು. | ವಿವಿಧ ರೀತಿಯ ಆಕೃತಿಗಳು ಬಣ್ಣದ ಪೆನ್ಸಿಲ್ | ಶಿಕ್ಷಕರು | ಕತ್ತರಿಸಿ ತಯಾರಿಸಲಾದ ಆಕೃತಿಗಳಿಗೆ ಬಣ್ಣ ತುಂಬುವಂತೆ ಶಿಕ್ಷಕರು ಸೂಚಿಸುವರು ಮಕ್ಕಳು ಅನುಸರಿಸುವರು. | ಸಮಾಜ ವಿಜ್ಞಾನ, – ಸಾರ್ವಜನಿಕ ಆಸ್ತಿ | ಸಾರ್ವಜನಿಕ ಆಸ್ತಿಗಳ ಬಗ್ಗೆ ತಿಳಿಯುವುದು. | ಸಾರ್ವಜನಿಕ ಆಸ್ತಿಗಳ ಪಟ್ಟಿ | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿತ ವಿಷಯಗಳ ಬಗ್ಗೆ ಸರಳವಾದ ಚರ್ಚೆ ನಡೆಸಲು ಸೂಚಿಸುವರು.<br>ತಾವು ತಿಳಿದ ಸಾರ್ವಜನಿಕ ಆಸ್ತಿಗಳ ಹೆಸರುಗಳನ್ನು ಕಪ್ಪು ಹಲಗೆಯಲ್ಲಿ ಪಟ್ಟಿ ಮಾಡುವರು. |
| | 30ನಿ | | | | ಶಿಕ್ಷಕರು | ನಾವು ತಿನ್ನುವ ಆಹಾರ ಶುದ್ಧವಾಗಿರಬೇಕು, ಕುಡಿಯುವ ನೀರನ್ನು ತೆರೆದಿಡಬಾರದು, ದಾರಿಯಲ್ಲಿ ಕತ್ತರಿಸಿ ಮಾರಾಟ ಮಾಡುವ ಆಹಾರವನ್ನು ತಿನ್ನಬಾರದು ಎಂಬುದರ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವರು.<br>ಮಕ್ಕಳು ಶಿಕ್ಷಕರು ಹೇಳುವ ನಿಯಮಗಳನ್ನು ಗಮನವಿಟ್ಟು ಆಲಿಸಿ ಅನುಸರಿಸುವರು. | | | | ಹಿರೇಮಣಿ | ಹಿರೇಮಣಿಯ ಸಹಾಯದಿಂದ ಬಣ್ಣ ಹಚ್ಚುವರು. | | | | ಹಿರೇಮಣಿ | ಹಿರೇಮಣಿಯು ಎಲ್ಲಾ ಮಕ್ಕಳು ಬರೆದಿರುವ ಪದಗಳನ್ನು ಪರಿಶೀಲಿಸುವರು.<br>ಮಕ್ಕಳು ಆ ವಸ್ತುಗಳ ಪಟ್ಟಿಯಲ್ಲಿ ತಮ್ಮ ಊರಿನಲ್ಲಿರುವ ಸಾರ್ವಜನಿಕ ಆಸ್ತಿಗಳನ್ನು ಗುರುತಿಸುವರು. |

| ಅವಧಿ | ಸಮಯ ನಿಮಿಷ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ/ಉದ್ದೇಶ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ/ಉದ್ದೇಶ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ/ಉದ್ದೇಶ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10 ನಿ | **ಕನ್ನಡ – ಪದ ಓದು ಅಕ್ಷರ ಕಲಿ ಹಂತ 2, 3, 4** | ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವರು.<br>ಅಭ್ಯಾಸ ಪತ್ರ ಅಕ್ಷರಗಳನ್ನು ಓದುವರು. | ಅಭಿನಯ ಗೀತೆ<br>ಅಕ್ಷರ ಹಾಗೂ ಪದಗಳ ಮಿಂಚು ಪಟ್ಟಿಗಳು | ಶಿಕ್ಷಕರು | **ಪೂ. ಸಿ.ಚ.**<br>"ಬಾ ಬಾ ಗಿಳಿಯೇ ಬಣ್ಣದ ಗಿಳಿಯೇ" ಎಂಬ ಹಾಡನ್ನು ಅಭಿನಯ ಸಹಿತವಾಗಿ ಹಾಡಿಸುವರು. | **ಕನ್ನಡ – ಹಾಡಿ ಹಾಡು** | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು | ಶಿಶುಗೀತೆಗಳ ಪುಸ್ತಕ | ಶಿಕ್ಷಕರು | **ಪೂ. ಸಿ.ಚ.**<br>1 ನೇ ತರಗತಿಯವರೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಶಿಕ್ಷಕರು | ಹಂತ 3 ರಲ್ಲಿನ 'ಡ – ಚ' ಅಕ್ಷರಗಳನ್ನು ಪರಿಚಯಿಸುವರು.<br>ಅಕ್ಷರಗಳನ್ನು ಬರೆಯುವ ಕ್ರಮ ಉಚ್ಚಾರಣೆಯ ಕ್ರಮವನ್ನು ಪರಿಚಯಿಸುವರು.<br>"ಬ–ಜ, ವ–ಮ, ನ–ಸ, ಈ ಅಕ್ಷರಗಳಲ್ಲಿನ ವ್ಯತ್ಯಾಸ ಹಾಗೂ ಸಾಮ್ಯತೆಗಳನ್ನು ಉದಾಹರಣೆಗಳ ಮೂಲಕ ಸ್ಪಷ್ಟ ಪಡಿಸುವರು. | | | | ಹಿರೇಮಣಿ | ಶಿಶುಗೀತೆಗಳ ಪುಸ್ತಕದಲ್ಲಿ ಕವನಗಳನ್ನು ಓದುವರು. | | | | | |
| | 10 ನಿ | | | ಪದಗಳ ಮಿಂಚುಪಟ್ಟಿಗಳು | ಶಿಕ್ಷಕರು | ಶಿಕ್ಷಕರು ಮಿಂಚುಪಟ್ಟಿ ಓದಿ ನಕಲು ಮಾಡಲು ಅಗತ್ಯ ಸೂಚನೆಗಳನ್ನು ನೀಡುವರು. | | | ಅಭ್ಯಾಸದ ಪುಸ್ತಕ | ಶಿಕ್ಷಕರು | ಮಕ್ಕಳು ಪದ್ಯವನ್ನು ಓದಲು ಅಗತ್ಯ ಸೂಚನೆಗಳನ್ನು ನೀಡುವರು. | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಹಿರೇಮಣಿ | ಶಿಕ್ಷಕರು ಕೊಟ್ಟ ಮಿಂಚು ಪಟ್ಟಿಗಳನ್ನು ಮಕ್ಕಳು ಓದುವರು. ಪದಗಳನ್ನು ಅಂದವಾಗಿ ನಕಲು ಮಾಡುವರು.<br>ಕೊಟ್ಟ ಅಕ್ಷರಗಳ ಮಿಂಚು ಪಟ್ಟಿಗಳಿಂದ ಪದಗಳನ್ನು ಜೋಡಿಸಿ ಓದುವರು.<br>ಹಿರೇಮಣಿಯು ತರಗತಿ ನಿರ್ವಹಣೆ ಮಾಡುವನು. | | | | ಶಿಕ್ಷಕರು | ಈ ಹಿಂದೆ ಕಲಿತ "ಬಾ ಬಾ ಗಿಳಿಯೇ" ಪದ್ಯವನ್ನು ಮಕ್ಕಳು ಸರದಿಯಂತೆ ಓದುವರು.<br>ಕಪ್ಪು ಕಲಗೆಯಲ್ಲಿ ಬರೆಯಲಾದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಮೌಖಿಕವಾಗಿ ಉತ್ತರ ಹೇಳುವರು.<br>ಶಿಕ್ಷಕರು ಪರಿಶೀಲಿಸಿ ತಿದ್ದುವರು. | | | | | |
| 2ನೇ ಅವಧಿ | 10 ನಿ | **ಗಣಿತ – ಸಂಕಲನ** | + ಮತ್ತು = ಚಿಹ್ನೆ ಪರಿಚಯ. | = ಮತ್ತು + ಚಿಹ್ನೆಯ ಮಿಂಚು ಪಟ್ಟಿಗಳು.<br>ಸ್ಥಳೀಯ ಲಭ್ಯವಿರುವ ಸಾಮಾಗ್ರಿಗಳು. | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>2 ನೇ ತರಗತಿಯವರೊಂದಿಗೆ ಪಾಲಗೊಳ್ಳುವರು. | **ಗಣಿತ – ಸಂಕಲನ** | ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಸಂಕಲನ ಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟ ಹಾಡನ್ನು ಹೇಳುವರು. ಶಿಕ್ಷಕರು ಸಂಕಲನ ಪಟ್ಟಿ ಬಳಸಿ ಲೆಕ್ಕಗಳನ್ನು ಮಾಡಲು ಸೂಚನೆಗಳನ್ನು ನೀಡುವರು. | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಹಿರೇಮಣಿ | **ನೇರ ಬೋಧನೆ :–**<br>'+' ಚಿಹ್ನೆ ಬರೆಯುವ ಕ್ರಮ ತಿಳಿಸುವರು, ಗಾಳಿಯಲ್ಲಿ, ಕಪ್ಪು ಹಲಗೆಯ ಮೇಲೆ, ಮಿಂಚು ಪಟ್ಟಿಗಳ ಮೇಲೆ ಬೆರಳುಗಳಾಡಿಸಿ ತೋರಿಸುವರು.<br>* ವಸ್ತುಗಳನ್ನು ಮಕ್ಕಳಿಗೆ ಕೊಟ್ಟು ಎಣಿಸಿ = ಚಿಹ್ನೆ ಬಳಸುವರು.<br>ಉದಾ :– 6 = 6<br>9 = 9 | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಸಂಕಲನ ಪಟ್ಟಿಯನ್ನು ಬಳಸಿ ಈ ಕೆಳಗಿನಂತೆ ಸರಳ ಲೆಕ್ಕಗಳನ್ನು ಮಾಡಲು ಸೂಚಿಸುವರು.<br>ಉದಾ :– 23 + 14 ಹ ಬಿ<br>2 3<br>+ 1 4<br>3 7 | | | | | |
| | 10 ನಿ | **ಓದು ಕಲಿ** | ಧಾನ್ಯಗಳ ಪರಿಚಯ, ಕಲಿಕೆಯ ಸಾಮರ್ಥ್ಯವನ್ನು ಹೊಂದುವರು. | ಸರಳ ಪದಗಳ ಮಿಂಚು ಪಟ್ಟಿ ವಿವಿಧ ರೀತಿಯ ಧಾನ್ಯಗಳು | ಶಿಕ್ಷಕರು | ಪದ ರಚನೆಯ ಮಿಂಚು ಪಟ್ಟಿಗಳ ಮೇಲೆ ವಿವಿಧ ರೀತಿಯ ಧಾನ್ಯಗಳನ್ನು ಜೋಡಿಸಲು ಶಿಕ್ಷಕರು ಸೂಚನೆ ನೀಡುವರು ಮಕ್ಕಳು ಅನುಸರಿಸುವರು.<br>ಉದಾ :– ಗಣಪ, ಗರಗಸ, ಸರಸ, ಪದಕ, ಕದನ ಇತ್ಯಾದಿ. | | | ಸರಳ ನಿತ್ಯ ಜೀವನದ ಸಮಸ್ಯೆಗಳ ಪಟ್ಟಿ, ಸಂಖ್ಯಾ ಮಿಂಚು ಪಟ್ಟಿಗಳು | ಶಿಕ್ಷಕರು | ಶಿಕ್ಷಕರು ತರಗತಿಯ ಪರಿಸರದ ವಸ್ತುಗಳನ್ನು ಎಣಿಕೆ ಮಾಡಿಸುವರು.<br>ಉದಾ :– 2 ನೇ ತರಗತಿಯಲ್ಲಿ 10 ಹೆಣ್ಣು ಮಕ್ಕಳಿದ್ದಾರೆ, 7 ಗಂಡು ಮಕ್ಕಳಿದ್ದಾರೆ ಆ ತರಗತಿಯ ಒಟ್ಟು ಮಕ್ಕಳೆಷ್ಟು? | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಶಿಕ್ಷಕರು | ಶಿಕ್ಷಕರು ಸೂಚನೆಯ ಮೇರೆಗೆ ಹಿರೇಮಣಿ ನೇತೃತ್ವದಲ್ಲಿ ಮೇಲಿನ ಚಟುವಟಿಕೆಯಲ್ಲಿ ಭಾಗವಹಿಸುವರು. | | | | ಶಿಕ್ಷಕರು | ಹೆಣ್ಣು ಮಕ್ಕಳು – 10<br>ಗಂಡು ಮಕ್ಕಳು – 7<br>ಒಟ್ಟು – 17<br>ಈ ರೀತಿಯ ಚಟುವಟಿಕೆಗಳನ್ನು ಮುಂದುವರೆಸುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ಪರಿಸರದ ಸ್ವಚ್ಛತೆಯ ಅರಿವಿನ ಸಾಮರ್ಥ್ಯವನ್ನು ಹೊಂದುವುದು. | ತೆಂಗಿನ ಗರಿಗಳು | ಶಿಕ್ಷಕರು | **ಪೂ. ಸಿ.ಚ.**<br>ಶಾಲಾ ಆವರಣದ ಸ್ವಚ್ಛತೆಯ ಬಗ್ಗೆ ಮಕ್ಕಳಿಂದ ಹಾಡು ಹೇಳಿಸುವರು. | ಜೀವನ ವಿಜ್ಞಾನ | | – | ಶಿಕ್ಷಕರು | **ಪೂ. ಸಿ.ಚ.**<br>(ಒಂದನೇ ತರಗತಿಯ ಮಕ್ಕಳ ಜೊತೆಯಲ್ಲಿ 2 ನೇ ತರಗತಿಯ ಮಕ್ಕಳು ಭಾಗವಹಿಸುವರು.) | ಕನ್ನಡ – ಮಲೆನಾಡ ಸಿರಿ : ಜಲಪಾತ | ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು. ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ, ಸಂವಾದ, ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು. | ಅಭ್ಯಾಸ ಪುಸ್ತಕ | ಶಿಕ್ಷಕರು | ಹಿರೇಮಣಿಯು ಮಕ್ಕಳಿಂದ ಶಿಕ್ಷಕರ ಸೂಚನೆಯಂತೆ ಹೊಸ ಪದಗಳನ್ನು ಗುರ್ತಿಸುವರು. |
| | 30ನಿ | | | | ಶಿಕ್ಷಕರು | ಮಕ್ಕಳು ಶಿಕ್ಷಕರ ಸೂಚನೆಯನ್ನುನುಸರಿಸಿ ಶಾಲಾ ಆವರಣವನ್ನು ಸ್ವಚ್ಛಗೊಳಿಸುವರು.<br>ಕಾಗದಗಳನ್ನು ಆರಿಸಿ ಎತ್ತಿ ಹಾಕುವರು. | | | | ಶಿಕ್ಷಕರು | ಒಂದನೇ ತರಗತಿಯವರೊಂದಿಗೆ ಸ್ವಚ್ಛತೆಯ ಕಾರ್ಯದಲ್ಲಿ ಪಾಲ್ಗೊಳ್ಳುವರು. | | | | ಹಿರೇಮಣಿ | ಈ ಹೊಸ ಹೊಸ ಪದಗಳಿಗೆ ಅರ್ಥಗಳನ್ನು ಹುಡುಕಿ ವಾಕ್ಯದಲ್ಲಿ ಬರೆಯುವರು. |
| | 10ನಿ | ಸಾ.ಉ.ಉ.ಕಾ. | ಆಟಕ್ಕೆ ಅವಶ್ಯಕವಾದ ವಸುಗಳನ್ನು ತಯಾರಿಸುವ ಸಾಮರ್ಥ್ಯ ಹೊಂದುವುದು. | | ಶಿಕ್ಷಕರು | ಶಿಕ್ಷಕರು ತೆಂಗಿನ ಗರಿಯಿಂದ ಕೈ ಗಡಿಯಾರ ಮಾಡಿ ತೋರಿಸುವರು. | ಕನ್ನಡ ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು. | ಅಭಿನಯ ಗೀತೆ, ಹಾಡುಗಳ ಪುಸ್ತಕ | ಶಿಕ್ಷಕರು | ಮಕ್ಕಳಿಗೆ ಕವನಗಳನ್ನು ಓದಲು ಅಗತ್ಯ ಸೂಚನೆಗಳನ್ನು ನೀಡುವರು. | | | | ಶಿಕ್ಷಕರು | ಮಕ್ಕಳ ಚಟುವಟಿಕೆ ಪರಿಶೀಲಿಸಿ ಮೌಲ್ಯ ಮಾಪನ ಮಾಡುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯ ನೆರವಿನಿಂದ ಮಕ್ಕಳು ತೆಂಗಿನಗರಿಯನ್ನು ಬಳಸಿ ಕೈ ಗಡಿಯಾರ ತಯಾರಿಸುವರು.<br>ಶಿಕ್ಷಕರೂ ಸಹ ನೆರವು ನೀಡುವರು. | | | | ಹಿರೇಮಣಿ | 'ಮಕ್ಕಳ ಕವನ' ಶಿಶುಗೀತೆಗಳ ಪುಸ್ತಕಗಳನ್ನು ಕೊಟ್ಟು ಆಯ್ದ ಕವಿತೆಗಳನ್ನು ರಾಗವಾಗಿ ಓದುವ ಅಭ್ಯಾಸ ಮಾಡಿಸುವರು. | | | | ಶಿಕ್ಷಕರು | ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವ ಪ್ರಶ್ನೆಗಳನ್ನು ಕಪ್ಪು ಹಲಗೆಯಲ್ಲಿ ಉತ್ತರ ಬರೆಸುವರು.<br>ಮಕ್ಕಳು ಉತ್ತರ ಬರೆದು ಕೊಳ್ಳುವರು.<br>ಮಕ್ಕಳು ಉತ್ತರಗಳನ್ನು ಅಭ್ಯಾಸ ಮಾಡುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆಯನ್ನು ಗ್ರಹಿಸುವರು. | ತರಕಾರಿಗಳ ಚಿತ್ರಪಟ | ಶಿಕ್ಷಕರು | **ಪೂ. ಸಿ.ಚ.**<br>2 ನೇ ತರಗತಿಯವರೊಂದಿಗೆ ಹಾಡು ಹೇಳುವರು. | ಪರಿಸರ ಅಧ್ಯಯನ – ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | | ಶಿಕ್ಷಕರು | **ಪೂ. ಸಿ.ಚ.**<br>ಹೆಬ್ಬೆರಳ್ ತೋರ್ ಬೆರಳು ಕುಣಿಯುತ್ತವೆ ತಕ್ಕದಿಮ್ಮಿ ತಂದಾನ ಥಯ್ಯ ಎಂಬ ಹಾಡನ್ನು ಹೇಳಿಕೊಡುವರು. | ವಿಜ್ಞಾನ – ವಿವಿಧ ಭೂ ಸ್ವರೂಪಗಳಲ್ಲಿ ಸಸ್ಯ ಮತ್ತು ಜನರ ಜೀವನ | ವಿವಿಧ ಭೂ ಸ್ವರೂಪಗಳ ಸಸ್ಯಗಳು ಮತ್ತು ಪ್ರಾಣಿಗಳ ಬಗ್ಗೆ ತಿಳಿಯುವರು. | ಗುಂಪು ಚಟುವಟಿಕೆ | ಶಿಕ್ಷಕರು | ಶಿಕ್ಷಕರು ಗುಂಪು ಚಟುವಟಿಕೆಗೆ ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಹಸಿಯಾಗಿ ತಿನ್ನುವ ಮತ್ತು ಬೇಯಿಸಿ ತಿನ್ನುವ ತರಕಾರಿಗಳನ್ನು ಪಟ್ಟಿ ಮಾಡಲು ಮಕ್ಕಳಿಗೆ ಸೂಚನೆಯನ್ನು ನೀಡುವರು. ಮಕ್ಕಳು ಪಟ್ಟಿ ಮಾಡುವರು.<br>ಬೇಯಿಸದೆ ತಿನ್ನುವ ತರಕಾರಿ :– ಬೆಂಡೆ, ಹುರುಳಿಕಾಯಿ, ಕ್ಯಾರೆಟ್ ಮೂಲಂಗಿ ಟಮೋಟ<br>ಬೇಯಿಸಿ ತಿನ್ನುವ ತರಕಾರಿ :– ಆಲೂಗಡ್ಡೆ, ಬೀಟರೂಟ್, ಕುಂಬಳಕಾಯಿ, ಬದನೆಕಾಯಿ ಇತ್ಯಾದಿ. | | | | – | ಕೈ ಬೆರಳುಗಳ ಕಾರ್ಯಗಳು ಮತ್ತು ಉಪಯೋಗಗಳನ್ನು ವಿವರಣಾತ್ಮಕವಾಗಿ ತಿಳಿಸುವರು.<br>ಕೈ ಬೆರಳುಗಳೇ ಇಲ್ಲದವರು ಹೇಗೆ ಕೆಲಸ ಮಾಡುತ್ತಾರೆ ? ಎಂಬುದನ್ನು ಕೆಲವು ಸೂಕ್ತ ನಿದರ್ಶನಗಳೊಂದಿಗೆ ವಿವರಣೆಯನ್ನು ತಿಳಿಸುವರು. | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂಡಿಸಿ ಒಂದೊಂದು ಗುಂಪಿನವರಿಗೆ ಒಂದೊಂದು ಕಾರ್ಯ ನೀಡುವರು.<br>ಉದಾ:– ಪರ್ವತ ಪ್ರದೇಶದ ಪ್ರಾಣಿಗಳು/ಸಸ್ಯಗಳು/ಬೆಳೆಯುವ ಬೆಳೆಗಳ ಪಟ್ಟಿ ಮಾಡುವುದು.<br>ಪರ್ವತಗಳ ಇಳಿಜಾರುಗಳಲ್ಲಿ ವಾಸಿಸುವ ಪ್ರಾಣಿಗಳು/ಬೆಳೆಯುವ ಬೆಳೆಗಳು/ಸಾಕುವ ಪ್ರಾಣಿಗಳು ಇತ್ಯಾದಿ ಪಟ್ಟಿ ಮಾಡುವರು. |
| | 10ನಿ | ಸಾ.ಉ.ಉ.ಕಾ. | – | – | ಶಿಕ್ಷಕರು | 3 ನೇ ಅವಧಿಯ ಚಟುವಟಿಕೆಯು 4 ನೇ ಅವಧಿಯಲ್ಲಿ ಮುಂದುವರಿಯುವುದು. | | | ಕೈಯಿಂದ ಮಾಡುವ ಕೆಲಸಗಳ ಪಟ್ಟಿ | ಹಿರೇಮಣಿ | **ಸೂಚನೆಯನ್ನು ನೀಡುವರು.**<br>ಹಿರೇಮಣಿಯ ಸಹಾಯದಿಂದ ಕೈಯಿಂದ ಮಾಡುವ ಕೆಲಸಗಳನ್ನು ಪಟ್ಟಿ ಮಾಡಿಸಲು ತಿಳಿಸುವರು. | ಸಮಾಜ – ಸಾರ್ವಜನಿಕ ಆಸ್ತಿ | ಸಾರ್ವಜನಿಕ ಆಸ್ತಿಗಳ ಬಗ್ಗೆ ತಿಳಿಯುವುದು. | ರೇಖಾ ಚಿತ್ರಗಳು | ಶಿಕ್ಷಕರು | ಸಾರ್ವಜನಿಕ ಆಸ್ತಿಯ ಬಗ್ಗೆ ಸರಳ ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯುವರು.<br>ಉದಾ :– ಸಾರ್ವಜನಿಕ ಆಸ್ತಿ ಯಾರದ್ದು ? |
| | 30ನಿ | | | | ಹಿರೇಮಣಿ | | | | | – | ಹಿರೇಮಣಿಯು ಕೆಲಸಗಳನ್ನು ಕಪ್ಪು ಹಲಗೆಯ ಮೇಲೆ ಪಟ್ಟಿ ಮಾಡುವರು.<br>ಉದಾ :– ಕಸಗುಡಿಸುವುದು ಬರೆಯುವುದು ಇತ್ಯಾದಿ.<br>ಮಕ್ಕಳು ಮಾಡಿದ ಪಟ್ಟಿಯನ್ನು ಮತ್ತೊಮ್ಮೆ ವೀಕ್ಷಿಸಿ ಸೂಕ್ತ ಮಾರ್ಗದರ್ಶನ ನೀಡುವರು. | | | | ಶಿಕ್ಷಕರು | ಮಕ್ಕಳಿಗೆ ಸಾರ್ವಜನಿಕ ಆಸ್ತಿಯ ಬಗ್ಗೆ ಈಗಾಗಲೇ ಇರುವ ಕಲ್ಪನೆಯನ್ನು ಇನ್ನಷ್ಟು ಸ್ಪಷ್ಟ ಪಡಿಸುವರು.<br>ಆದಾಯ ತೆರಿಗೆಯನ್ನು ವಿವರಿಸುವರು. ವೃತ್ತಿ ತೆರಿಗೆ ಮತ್ತು ಕಂದಾಯಗಳ ಅರ್ಥ ವಿವರಿಸುವರು.<br>ಸರ್ಕಾರ ರಚನೆ – ಆಡಳಿತ – ಕಾರ್ಯ ನಿರ್ವಹಣೆ ಇತ್ಯಾದಿಗಳನ್ನು ರೇಖಾ ಚಿತ್ರಗಳ ಮೂಲಕ ಮಕ್ಕಳಿಗೆ ವಿವರಿಸುವರು. |

**ಒಂದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 1ನೇ ಅವಧಿ | 10 ನಿ | ಕನ್ನಡ – ಪಾಠ ಓದು ಅಕ್ಷರ ಕಲಿ ಹಂತ 2, 3, 4 | ವರ್ಣಮಾಲೆಯ ಸರಳ ಅಕ್ಷರಗಳನ್ನು ಪತ್ತೆ ಹಚ್ಚಿ ಗುರುತಿಸುತ್ತಾರೆ. ಮತ್ತು ಬರೆಯುತ್ತಾರೆ. ಅಕ್ಷರಗಳನ್ನು ಓದುತ್ತಾರೆ | ಅಭಿನಯ ಗೀತೆ, ಪದಗಳ ಸಂಗ್ರಹ, ಕಪ್ಪು ಹಲಗೆ | ಶಿಕ್ಷಕರು | **ಪೂ. ಸಿ. ಚ :–** "ತೋಟಕೆ ಹೋಗೋ ತಿಮ್ಮ ತೋಳ ಬಂದಿತಮ್ಮ" ಎಂಬ ಹಾಡನ್ನು ಹಾಡಿಸುವರು. |
| | 30 ನಿ | | | | ಹಿರೇಮಣಿ | ಮಕ್ಕಳಿಗೆ ಕಪ್ಪು ಕಲಗೆಯಲ್ಲಿ ಬರೆದಿರುವ ಪದಗಳನ್ನು ಓದಲು, ಬರೆಯಲು ಶಿಕ್ಷಕರು ಸೂಚನೆ ನೀಡುವರು.<br><br>ಮಕ್ಕಳು ಹಿರೇಮಣಿಯ ನೆರವಿನಿಂದ ಬರೆದು, ಓದಿ ಕಲಿಯುವರು.<br>ಪರ, ಯಮ, ಜವ, ಮನ, ಜನ, ಜಗ, ಗಜ, ಉಡ, ವಟ, ಇತ್ಯಾದಿ |
| | 10 ನಿ | | | ಮಿಂಚು ಪಟ್ಟಿಗಳು | ಶಿಕ್ಷಕರು | ಮಕ್ಕಳ ಬರವಣಿಗೆಯನ್ನು ಪರಿಶೀಲಿಸುವರು. |
| | 30 ನಿ | | | | ಶಿಕ್ಷಕರು | ಹಿಂದಿನ ಮತ್ತು ಈ ಅವಧಿಯಲ್ಲಿ ಕಲಿತ ಎಲ್ಲಾ ಅಕ್ಷರಗಳ ಮಿಂಚುಪಟ್ಟಿಗಳನ್ನು ಬೆರೆಸಿ ಮಕ್ಕಳಿಂದ ಅಕ್ಷರಗಳನ್ನು ಗುರುತಿಸಿ ಓದಿಸಿ, ಬರೆಸುವರು.<br>ಉದಾ :– ರಮ, ಗಗನ, ಚಮಚ ಇತ್ಯಾದಿ |
| 2ನೇ ಅವಧಿ | 10 ನಿ | ಗಣಿತ – ಸಂಕಲನ | + ಮತ್ತು = ಚಿಹ್ನೆ ಪರಿಚಯ | =, + ಚುಕ್ಕಿ ಚಿತ್ರಗಳು,ಅಂಕಿಗಳ ಮಿಂಚುಪಟ್ಟಿಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–** ಶಿಕ್ಷಕರು ಕಥೆಯನ್ನು ಹೇಳುವರು. |
| | 30 ನಿ | | | | ಹಿರೇಮಣಿ | + ಮತ್ತು = ಚಿಹ್ನೆಗಳ ಚುಕ್ಕಿ ಚಿತ್ರಗಳನ್ನು ಸೇರಿಸುವರು<br>+ ಮತ್ತು = ಚಿಹ್ನೆಗಳನ್ನು ಬರೆಯುವ ಅಭ್ಯಾಸ ಮಾಡುವರು.<br>ಉದಾ :–  |
| | 10 ನಿ | | | – | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. |
| | 30 ನಿ | | | | ಶಿಕ್ಷಕರು | ಶಿಕ್ಷಕರು ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 59 ಬಳಸಿ ಮೌಲ್ಯಮಾಪನ ಮಾಡುವರು. ಮಕ್ಕಳು ಪುಟ ಸಂಖ್ಯೆ 59ರ ಲೆಕ್ಕಗಳನ್ನು ಮಾಡುವರು. |

**ಎರಡನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 1ನೇ ಅವಧಿ | 10 ನಿ | ಕನ್ನಡ – ನಾಗರ ಹಾವು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು. | | ಶಿಕ್ಷಕರು | **ಪೂ. ಸಿ. ಚ :–** 1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು, ಕಲಿಕೆಗೆ ಅಣಿಗೊಳ್ಳುವರು. |
| | 30 ನಿ | | | | ಶಿಕ್ಷಕರು | ಪಠ್ಯ ಪುಸ್ತಕದಲ್ಲಿರುವ "ಹಾವಿನ ಹಾಡು" ಮೊದಲ ಪ್ಯಾರಾವನ್ನು ರಾಗವಾಗಿ ಹಾವಭಾವದೊಂದಿಗೆ ಹೇಳಿಕೊಡುವರು.<br><br>"ನಾಗರ ಹಾವೆ. . . . ಕೈಗಳ ಮುಗಿವೆ ಹಾಲನ್ನಿವೆ"<br>"ಬಾ ಬಾ ಬಾ ಬಾ. . . . . " |
| | 10 ನಿ | | | ಅಭ್ಯಾಸ ಪುಸ್ತಕ | ಶಿಕ್ಷಕರು | ಮಕ್ಕಳಿಗೆ ಪದ್ಯದ ಮೊದಲ ಭಾಗವನ್ನು ಅಂದವಾಗಿ ಬರೆಯಲು ಸೂಚಿಸುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಕಪ್ಪು ಹಲಗೆಯ ಮೇಲೆ ಸರದಿಯ ಪ್ರಕಾರ 'ಹಾವಿನ ಹಾಡು' ಪದ್ಯದ ಮೊದಲ ಭಾಗವನ್ನು ಬರೆಯುವರು.<br><br>ಹಿರೇಮಣಿಯು ತಪ್ಪುಗಳನ್ನು ತಿದ್ದುವನು. |
| 2ನೇ ಅವಧಿ | 10 ನಿ | ಲಲಿತ ಕಲೆ | ನಾಡಗೀತೆಯನ್ನು ರಾಗವಾಗಿ ಮತ್ತು ಲಯಬದ್ಧವಾಗಿ ಹಾಡುವ ಸಾಮರ್ಥ್ಯವನ್ನು ಹೊಂದುವರು. | ನಾಡಗೀತೆ, ಧ್ವನಿ ಸುರುಳಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–** ಶಿಕ್ಷಕರು ಕಥೆ ಹೇಳುವರು.<br><br>ಧ್ವನಿ ಸುರುಳಿ ಆಲಿಸಲು ಸೂಚಿಸುವರು. |
| | 30 ನಿ | | | | ಶಿಕ್ಷಕರು | ಶಿಕ್ಷಕರು ನಾಡಗೀತೆಯ ಧ್ವನಿ ಸುರಳಿಯನ್ನು ಆಲಿಸಿದ ನಂತರ ಅಭ್ಯಾಸ ಮಾಡಲು ಸೂಚನೆ ನೀಡುವರು.<br><br>ಶಿಕ್ಷಕರ ಮಾರ್ಗದರ್ಶನದಲ್ಲಿ ಹಾಗು ಹಿರೇಮಣಿಯ ಸಹಾಯದಿಂದ ಚಟುವಟಿಕೆಯಲ್ಲಿ ಮಕ್ಕಳು ಭಾಗವಹಿಸುವರು. |
| | 10 ನಿ | ಗಣಿತ – ಸಂಕಲನ | ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | 15cm x 6cm ಅಳತೆಯ 4 ಕಾರ್ಡ್‌ಗಳು ಸಮಸ್ಯೆಗಳ ಪಟ್ಟಿ | ಶಿಕ್ಷಕರು | ಶಿಕ್ಷಕರು ನಿತ್ಯ ಜೀವನದ ಲೆಕ್ಕಗಳನ್ನು ಬಿಡಿಸಲು ಸೂಚನಗಳನ್ನು ನೀಡುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ಗುಂಪಿನಲ್ಲಿ ಕೂಡಿಸಿ ದೈನಂದಿನ ಲೆಕ್ಕಗಳನ್ನು ಬರೆದಿರುವ ಒಂದೊಂದು ಕಾರ್ಡ್‌ಗಳನ್ನು ನೀಡಿ ಲೆಕ್ಕಗಳನ್ನು ಹಿರೇಮಣಿಯ ಸಹಾಯದಿಂದ ಬಿಡಿಸಲು ಸೂಚಿಸುವರು. |

**ಐದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 1ನೇ ಅವಧಿ | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| 2ನೇ ಅವಧಿ | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10 ನಿ, 30 ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |

## ಒಂದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 3ನೇ ಅವಧಿ | 10 ನಿ | ಜೀವನ ವಿಜ್ಞಾನ | | – | – | **ಪೂ. ಸಿ. ಚ :–** 2 ನೇ ತರಗತಿಯ ಮಕ್ಕಳ ಜೊತೆಯಲ್ಲಿ 1 ನೇ ತರಗತಿಯ ಮಕ್ಕಳೂ ಸಹ ಭಾಗವಹಿಸಿ ಚಟುವಟಿಕೆ ಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | | |
| | 10 ನಿ | ಲಲಿತ ಕಲೆ | ಕಲ್ಪನಾ ಶಕ್ತಿ ಮತ್ತು ಗುರುತಿಸುವಿಕೆ ಇತರ ಸಾಮರ್ಥ್ಯಗಳನ್ನೂ ಹೊಂದುವುದು. | ಚುಕ್ಕಿಗಳಿಂದ ರಚಿಸಿದ ಚಿತ್ರಗಳು, ಪೆನ್ಸಿಲ್ | ಹಿರೇಮಣಿ | ಚುಕ್ಕಿಗಳಿಂದ ರಚಿಸಿದ ಚಿತ್ರವನ್ನು ಗೆರೆಗಳ ಮುಖಾಂತರ ಸೇರಿಸಿ, ಚಿತ್ರದ ಹೆಸರನ್ನು ಹೇಳಲು ಮತ್ತು ಬರೆಯಲು ಶಿಕ್ಷಕರು ಸೂಚನೆ ನೀಡುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿ ಸಹಾಯದಿಂದ ಚಿತ್ರ ಬರೆಯುವ ಚಟುವಟಿಕೆಯನ್ನು ಮಾಡುವರು. |
| 4ನೇ ಅವಧಿ | 10 ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆಯನ್ನು ಗ್ರಹಿಸುವರು. | ಹಾಡು, ಪ್ರಶ್ನಾವಳಿ ಕಾರ್ಡು | ಶಿಕ್ಷಕರು | **ಪೂ. ಸಿ. ಚ :–** 2ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. |
| | 30 ನಿ | | | | ಶಿಕ್ಷಕರು | ಪಾಠಕ್ಕೆ ಸಂಬಂಧಿಸಿದಂತೆ ಹಾಗೂ ಅಭ್ಯಾಸದಲ್ಲಿರುವ ಹಲವಾರು ಸಣ್ಣ ಸಣ್ಣ ಸರಳ ಪ್ರಶ್ನೆಗಳ ಕಾರ್ಡ್‌ನ್ನು ತಯಾರಿಸಿಕೊಂಡು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>ಉದಾ :– 1. ಪ್ರತಿ ದಿನ ಆಹಾರವನ್ನು ತಿನ್ನವೆಯಾ ?<br>2. ನಿನಗೆ ಯಾವ ತರಕಾರಿ ಇಷ್ಟ ?<br>3. ಅಶುದ್ಧವಾದ ನೀರನ್ನು ಕುಡಿದರೆ ಏನಾಗುತ್ತದೆ. ? |
| | 10 ನಿ | | | – | ಶಿಕ್ಷಕರು | ಶಿಕ್ಷಕರು ಸೂಚನೆಯನ್ನು ನೀಡುವರು. |
| | 30 ನಿ | | | | ಹಿರೇಮಣಿ | ಹಿರೇಮಣಿಯ ಸಹಾರದಿಂದ ಅಕ್ಕಿ ಹಿಟ್ಟು, ಸೋಪ್ಪು ತರಕಾರಿ, ಮೊಟ್ಟೆ ಬೇಳೆ, ಈ ಮೇಲಿನ ವಸ್ತುಗಳಿಂದ ಯಾವ ಯಾವ ಆಹಾರವನ್ನು ತಯಾರಿಸುವರು ಎಂಬುದನ್ನು ತಿಳಿಸಲು ಹೇಳುವರು.<br><br>ನಂತರ ಶಿಕ್ಷಕರು ಪರಿಶೀಲಿಸುವರು. |

## ಎರಡನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 3ನೇ ಅವಧಿ | 10 ನಿ | ಜೀವನ ವಿಜ್ಞಾನ | ಆರೋಗ್ಯಕರ ಅಭ್ಯಾಸಗಳ ಅರಿವನ್ನು ಮೂಡಿಸುವುದು. | ಜೀವನ ವಿಜ್ಞಾನ ಪುಸಕ ಮತ್ತು ಸಂಬಂದ ಪಟ್ಟ ಚಾರ್ಟ್‌ಗಳು | ಶಿಕ್ಷಕರು | **ಪೂ. ಸಿ. ಚ :–** ಶಿಕ್ಷಕರು ಚಟುವಟಿಕೆ ಆಟ ಆಡಿಸುವರು.<br>ಕಪ್ಪು ಹಲಗೆಯ ಮೇಲೆ ಬರೆದ ಆರೋಗ್ಯಕರ ಅಭ್ಯಾಸಗಳನ್ನು ನಕಲು ಮಾಡಲು ಶಿಕ್ಷಕರು ಸೂಚಿಸುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿಯ ಸಹಾಯದೊಂದಿಗೆ ನಕಲು ಮಾಡಿ ಓದುವರು.<br>ಉದಾ :– 1. ಪ್ರತಿ ದಿನ ಸ್ನಾನ ಮಾಡುವುದು.<br>2. ನಿಯಮಿತವಾಗಿ ಉಗುರುಗಳನ್ನು ಕತ್ತರಿಸುವುದು.<br>3. ಸ್ವಚ್ಛವಾದ ಮತ್ತು ಸಡಿಲವಾದ ಬಟ್ಟೆಗಳನ್ನು ಧರಿಸುವುದು.<br>(ಜೀವನ ವಿಜ್ಞಾನ ಪುಸ್ತಕದ ಪುಟ ಸಂಖ್ಯೆ 15ನ್ನು ಗಮನಿಸುವುದು.) |
| | 10 ನಿ | ಲಲಿತ ಕಲೆ | – | – | ಶಿಕ್ಷಕರು | ಒಂದನೇ ತರಗತಿಯ ಮಕ್ಕಳ ಜೊತೆಯಲ್ಲಿ 2 ನೇ ತರಗತಿಯ ಮಕ್ಕಳೂ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 30 ನಿ | | | | ಹಿರೇಮಣಿ | |
| 4ನೇ ಅವಧಿ | 10 ನಿ | ಪರಿಸರ ಅಧ್ಯಯನ – ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಹಾಡು, ಕಾಲಿನ ಚಿತ್ರಪಟ | ಶಿಕ್ಷಕರು | **ಪೂ. ಸಿ. ಚ :–** "ಹೆಬ್ಬೆರಳ್ ತೋರ್ ಬೆರಳು ಕುಣಿಯುತ್ತವೆ ತಕ್ಕ ತೈಯ ತಂದಾನೋ ಥಯ್ಯಾ" |
| | 30 ನಿ | | | | ಹಿರೇಮಣಿ | ಶಿಕ್ಷಕರು ಪಠ್ಯ ಪುಸ್ತಕದಲ್ಲಿರುವ 29 ನೇ ಪುಟ ಸಂಖ್ಯೆ ಚಿತ್ರವನ್ನು ವೀಕ್ಷಿಸಲು ಹೇಳಿ ಭಾಗಗಳನ್ನು ಗುರುತಿಸಲು ಹೇಳುವರು.<br>ತೊಡೆ, ಮೊಣಕಾಲು, ಮುಂಗಾಲು, ಬೆರಳು.<br>ಮಕ್ಕಳು ತಮ್ಮ ತಮ್ಮ ಕಾಲುಗಳಲ್ಲಿರುವ ಭಾಗಗಳನ್ನು ಚಿತ್ರದ ಮೂಲಕ ವೀಕ್ಷಿಸುತ್ತಾ ಗುರುತಿಸುವರು.<br>ಮಕ್ಕಳು ಹಿರೇಮಣಿಯ ನೆರವಿನಿಂದ ಕಾಲಿನ ಭಾಗಗಳನ್ನು ಗುರ್ತಿಸುವರು. |
| | 10 ನಿ | ಸಾ.ಉ.ಉ.ಕಾ. | – | | ಶಿಕ್ಷಕರು | 3 ನೇ ಅವಧಿಯ ಸಾ.ಉ.ಉ.ಕಾ. ಚಟುವಟಿಕೆ 4 ನೇ ಅವಧಿಯಲ್ಲೂ ಮುಂದುವರಿಯುವುದು ಹಾಗು ಚಿತ್ರಗಳ ಉಪಯೋಗಗಳ ಬಗ್ಗೆ ಹೇಳುವರು. |
| | 30 ನಿ | | | | ಹಿರೇಮಣಿ | |

## ಐದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 3ನೇ ಅವಧಿ | 10 ನಿ | ಕನ್ನಡ – ಮಲೆನಾಡ ಸಿರಿ : ಜಲಪಾತ | ಅಪರಿಚಿತ ಸನ್ನಿವೇಶಗಳನ್ನು, ಸಂಭಾಷಣೆ, ಸಂವಾದ, ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು. ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು. ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. | ಧ್ವನಿ ಸುರುಳಿ | ಶಿಕ್ಷಕರು | **ಪೂ. ಸಿ. ಚ :–** ಕಾಗುಣಿತಾಕ್ಷರಗಳು ರಚನೆಯಾಗುವ ಬಗೆಯನ್ನು ವಿವರಿಸುವರು. |
| | 30 ನಿ | | | | ಶಿಕ್ಷಕರು | ಕ್ + ಉ = ಕು ಸ್ವರ ವ್ಯಂಜನಗಳನ್ನು ಬಿಡಿಸುವ ಜೋಡಿಸುವ ರೀತಿ ತಿಳಿಸುವರು.<br>ತ್ + ಎ = ತೆ, ಪ್ + ಓ = ಪೋ ಎಂಬಂತೆ ಇನ್ನುಳಿದ ಗುಣಿತಾಕ್ಷರಗಳನ್ನು ಮಕ್ಕಳಿಂದ ಕಪ್ಪು ಹಲಗೆಯಲ್ಲಿ ಬಿಡಿಸುವರು. |
| | 10 ನಿ | ವಿಜ್ಞಾನ – ವಿವಿಧ ಭೂ ಸ್ವರೂಪಗಳಲ್ಲಿ ಸಸ್ಯ ಪ್ರಾಣಿ ಮತ್ತು ಜನರ ಜೀವನ | ವಿವಿಧ ಭೂ ಸ್ವರೂಪಗಳ ಸಸ್ಯಗಳು ಮತ್ತು ಪ್ರಾಣಿಗಳ ಬಗ್ಗೆ ತಿಳಿಯವರು. | ಓಯಸಿಸ್, ಒಂಟೆ, ಉಷ್ಟಪಕ್ಷಿ, ವಿವಿಧ ಭೂ ಸ್ವರೂಪಗಳ ಚಿತ್ರಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿತ ವಿಷಯದ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುವರು. |
| | 30 ನಿ | | | | ಶಿಕ್ಷಕರು | ಚಿತ್ರಗಳನ್ನು ಬಳಸಿ ಕಣಿವೆಗಳು, ಮೈದಾನಗಳು, ಪ್ರಸ್ಥ ಭೂಮಿಗಳು ಮತ್ತು ಮರುಭೂಮಿಗಳಲ್ಲಿ ಬೆಳೆಯುವ ಸಸ್ಯಗಳು, ವಾಸಿಸುವ ಪ್ರಾಣಿಗಳ ಬಗ್ಗೆ, ಅಲ್ಲಿನ ಜನರ ಜೀವನ ಕ್ರಮದ ಬಗ್ಗೆ ಚರ್ಚಿಸುವರು. ಅವರು ಬೆಳೆಯುವ ಬೆಳೆಗಳು, ಸಾಕುವ ಪ್ರಾಣಿಗಳ ಬಗ್ಗೆ ಚರ್ಚಿಸುವರು. |
| 4ನೇ ಅವಧಿ | 10 ನಿ | ಜೀವನ ವಿಜ್ಞಾನ | ಆರೋಗ್ಯಕ್ಕೆ ಹಾನಿಯಾಗುವುದನ್ನು ತಪ್ಪಿಸಲಿಕ್ಕಾಗಿ ಪ್ರಥಮ ಚಿಕಿತ್ಸೆ ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ಅರಿವನ್ನು ಮೂಡಿಸುವುದು. | ಸುರಕ್ಷತಾ ಕ್ರಮಗಳು ಮತ್ತು ಪ್ರಥಮ ಚಿಕಿತ್ಸೆಯ ಪರಿಕರಗಳು, ಗುಂಪು ಚಟುವಟಿಕೆ | ಶಿಕ್ಷಕರು | 1 ಮತ್ತ 2 ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಪ್ರಥಮ ಚಿಕಿತ್ಸೆ ಸೂಚನೆಗಳನ್ನು ನೀಡುವರು.<br>ತರಗತಿಯಲ್ಲಿ ಸಂಭವಿಸುವ ಸಣ್ಣ ಸಣ್ಣ ಅಪಘಾತಗಳು ಉಂಟಾದಾಗ ಯಾವ ರೀತಿಯ ಪ್ರಥಮ ಚಿಕಿತ್ಸೆಯನ್ನು ಮಾಡಬೇಕು ಎಂಬುದರ ಬಗ್ಗೆ ಅರಿವನ್ನುಂಟು ಮಾಡುವರು.<br>ಉದಾ :– 1. ಬೆರಳು ಕೊಯ್ದು ಕೊಂಡಾಗ<br>2. ಮಕ್ಕಳು ಬಿದ್ದಾಗ<br>ಹೀಗೆ ಇತ್ಯಾದಿ. |
| | 10 ನಿ | ಸಮಾಜ ವಿಜ್ಞಾನ ಸಾರ್ವಜನಿಕ ಆಸ್ತಿ | ಸಾರ್ವಜನಿಕ ಆಸ್ತಿಗಳ ಬಗ್ಗೆ ತಿಳಿಯುವುದು. | ಸಾರ್ವಜನಿಕ ಆಸ್ತಿಗಳ ಚಿತ್ರ. | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿತ ವಿಷಯಗಳನ್ನು ಪುನರಾವರ್ತಿಸುವರು. |
| | 30 ನಿ | | | | ಶಿಕ್ಷಕರು | ಸಾರ್ವಜನಿಕ ಆಸ್ತಿಗಳನ್ನು ಸರ್ಕಾರವು ಹೇಗೆ ನಿರ್ಮಾಣ ಮಾಡುತ್ತದೆ ಮತ್ತು ಅವುಗಳನ್ನು ಹೇಗೆ ಸಂರಕ್ಷಿಸಬೇಕು ಎಂಬುದನ್ನು ಮಕ್ಕಳಿಗೆ ವಿವರಿಸುವರು.<br><br>ಸಾರ್ವಜನಿಕ ಆಸ್ತಿಯನ್ನು ನಾಶ ಮಾಡುವ ವ್ಯಕ್ತಿಗಳು ಸಮಾಜ ಘಾತುಕರಾಗುವ ಬಗೆಯನ್ನು ವಿವರಿಸುವರು. |

**ಒಂದನೇ ತರಗತಿ**

| ಅವಧಿ | ಸಮಯ ಹಂತ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1ನೇ ಅವಧಿ | 10 ನಿ | ಕನ್ನಡ – ಪದ ಓದು ಅಕ್ಷರ ಕಲಿ ಹಂತ – 2, 3, 4 | ವರ್ಣ-ಮಾಲೆಯ ಸರಳ ಅಕ್ಷರಗಳನ್ನು ಒತ್ತಾಗಿ ಮತ್ತು ಬಿಡಿಯಾಗಿ ಗುರ್ತಿಸುವರು. ಅಕ್ಷರ ಪದ ಅಕ್ಷರಗಳನ್ನು ಬರೆಯುವರು. | ಅಕ್ಷರಗಳ ಪದಗಳ ಮಿಂಚು ಪಟ್ಟಿಗಳು | ಶಿಕ್ಷಕರು | **ಪೂ.ಸಿ.ಚ :–**<br>"ತೋಟಕ್ಕೆ ಹೋಗೋ ತಿಮ್ಮ" ಎಂಬ ಹಾಡನ್ನು ಹಾಡಿಸುವರು" |
| | 30 ನಿ | | | | ಶಿಕ್ಷಕರು | ಪಠ್ಯ ಪುಸ್ತಕದಲ್ಲಿರುವ ಹಂತ 3 ರಲ್ಲಿರುವ ಅಕ್ಷರಗಳು ಮತ್ತು ಪದಗಳು ಓದಿಸುವರು.<br>ಉದರ ಚಟ ಟಪ ಟಪ, ಡವ ಡವ<br>ಪದ ಉಮ ಉದಯ ಚದರ<br>ಪಟ ಡಬಡಬ ಪಟ್ಟಣ ಇತ್ಯಾದಿ. |
| | 10 ನಿ | | | ಅಭ್ಯಾಸ ಪುಸ್ತಕ | ಶಿಕ್ಷಕರು | ಪಠ್ಯ ಪುಸ್ತಕದಲ್ಲಿನ ಪ ಯ ಉ ಡ ಟ ಚ ಅಕ್ಷರಗಳನ್ನು ಬರೆಯಲು ಹೇಳುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಪಠ್ಯ ಪುಸ್ತಕದಲ್ಲಿ ಅಭ್ಯಾಸದ ಹಾಳೆಗಳಲ್ಲಿ ಕೊಟ್ಟಿರುವ ಅಕ್ಷರಗಳನ್ನು ಅಂದವಾಗಿ ನಕಲು ಮಾಡುವರು.<br>ಹಿರೇಮಣಿ ಮಕ್ಕಳಿಗೆ ನೆರವು ನೀಡುವರು |
| 2ನೇ ಅವಧಿ | 10 ನಿ | ಗಣಿತ – ಸಂಕಲನ | ಮೊತ್ತ 9 ಕ್ಕೆ ಮೀರದಂತೆ + ಮತ್ತು = ಚಿಹ್ನೆ ಬಳಸಿ ಸಂಕಲನ ಮಾಡುವರು | ಸಂಖ್ಯಾ ಮಿಂಚುಪಟ್ಟಿಗಳು, ಸ್ಥಳೀಯ ಲಭ್ಯ ಸಾಮಗ್ರಿಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಒಂದು ಒಂದು ಎರಡು ಆಟಕ್ಕೆ ಎದ್ದು ಹೊರಡು" ಈ ಹಾಡು ಹೇಳಿ ಕೊಡುವರು. |
| | 30 ನಿ | | | | ಶಿಕ್ಷಕರು | ಶಿಕ್ಷಕರು ಸಂಖ್ಯಾ ಚಿತ್ರಗಳನ್ನು ಬಳಸಿ + ಮತ್ತು = ಚಿಹ್ನೆ ಬಳಸಿ ಸಂಕಲನ ಮಾಡುವ ಕ್ರಮ ತಿಳಿಸುವರು.<br>ಉದಾ :– 2 + 1 = 3<br>ಇದೇ ರೀತಿ ಬೇರೆ ಬೇರೆ ಚಿತ್ರಗಳನ್ನು ಬಳಸಿ ಪುನರಾವರ್ತಿಸುವರು. |
| | 10 ನಿ | ಲಲಿತ ಕಲೆ | ವಿವಿಧ ಜಾತಿಯ ಸಸ್ಯಗಳ ಪರಿಚಯ ಹಾಗೂ ಬಿಡಿ ಭಾಗಗಳನ್ನು ಜೋಡಿಸುವ ವಿಧಾನವನ್ನು ಅರಿಯುವರು. | ಕತ್ತರಿಸಿದ ವಿವಿಧ ಜಾತಿಯ ಸಸ್ಯಗಳ ಬಿಡಿಭಾಗಗಳು | ಶಿಕ್ಷಕರು | ಕತ್ತರಿಸಿದ ಸಸ್ಯದ ಬಿಡಿ ಭಾಗಗಳನ್ನು ಜೋಡಿಸಿ ಹೆಸರುಗಳನ್ನು ಹೇಳಲು ಶಿಕ್ಷಕರು ಸೂಚಿಸುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಶಿಕ್ಷಕರು ಸೂಚನೆಯನ್ನನುಸರಿಸಿ, ಹಿರೇಮಣಿಯ ಸಹಾಯದಿಂದ ಚಟುವಟಿಕೆ ಮಾಡುವರು. |

**ಎರಡನೇ ತರಗತಿ**

| ಅವಧಿ | ಸಮಯ ಹಂತ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ – ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು. | ಅಭಿನಯ ಗೀತೆ, ಪದ್ಯಗಳು | ಶಿಕ್ಷಕರು | **ಪೂ.ಸಿ.ಚ :–**<br>1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. |
| | 30 ನಿ | | | | ಹಿರೇಮಣಿ | "ನಾಗರಹಾವೇ" ಪದ್ಯದ ಮೊದಲ ಭಾಗವನ್ನು ಹಾಡಿಕೊಳ್ಳುವಂತೆ .. ಸೂಚನೆ ನೀಡುವರು.<br>ಮಕ್ಕಳು ಈ ಪದ್ಯಗಳನ್ನು ಹಾಡುವರು<br>ಇತರೆ ಪದ್ಯಗಳನ್ನು ಹಾಡುವರು<br>ಮಕ್ಕಳಿಂದ ಕಲಿತ ಪದ್ಯಗಳನ್ನು ಹಾಡಿಸುವರು. |
| | 10 ನಿ | | | ಪಠ್ಯ ಪುಸ್ತಕ, ಹಾಡು | ಶಿಕ್ಷಕರು | "ಹಾವಿನ ಹಾಡು" ಪದ್ಯದ 2–3 ನೇ ಚರಣಗಳನ್ನು ರಾಗವಾಗಿ ಹಾಡಿಸುವರು. |
| | 30 ನಿ | | | | ಶಿಕ್ಷಕರು | ಅರ್ಥ ವಿವರಣೆ ನೀಡುವರು.<br>'ಹ' ಕಾರ ಉಚ್ಚಾರಣೆಯನ್ನು ಸರಿಯಾಗಿ ಅಭ್ಯಾಸ ಮಾಡಿಸುವರು.<br>"ಹಳದಿಯ ಹೆಡೆಯನು ಬಿಚ್ಚೋ ಬೇಗಾ. . . ಹೊಳಪಿನ ಹೊಂದಲೆ ತೂಗೋ ನಾಗಾ" ಈ ಸಾಲುಗಳನ್ನು ಹೆಚ್ಚು ಪುನರಾವರ್ತಿಸುವರು. |
| 2ನೇ ಅವಧಿ | 10 ನಿ | ಗಣಿತ – ಸಂಕಲನ | ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಚಿತ್ರ ಪಟ್ಟಿಗಳು, ಸಂಖ್ಯಾ ಮಿಂಚು ಪಟ್ಟಿಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>1 ನೇ ತರಗತಿಯವರೊಂದಿಗೆ ಹಾಡುವರು.<br>ಅಭ್ಯಾಸ ಪುಸ್ತಕದ ಚಟುವಟಿಕೆ ಮಾಡಲು ಶಿಕ್ಷಕರು ಸೂಚನೆಗಳನ್ನು ನೀಡುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 88 ರ ಚಟುವಟಿಕೆ ಮಾಡಲು ಸೂಚಿಸುವರು.<br>ಮಕ್ಕಳು ಅಭ್ಯಾಸ ಪುಸ್ತಕದ ಚಟುವಟಿಕೆ ಮಾಡುವರು.<br>ಶಿಕ್ಷಕರು ಪರಿಶೀಲಿಸುವರು. |
| | 10 ನಿ | | | ಚಿತ್ರ ಪಟ್ಟಿಗಳು, ಸಂಖ್ಯಾ ಮಿಂಚು ಪಟ್ಟಿಗಳು | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. |
| | 30 ನಿ | | | | ಶಿಕ್ಷಕರು | ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 89 ರ ನಿತ್ಯ ಜೀವನದ ಲೆಕ್ಕಗಳನ್ನು ಬಿಡಿಸಲು ಮಕ್ಕಳಿಗೆ ನೆರವು ನೀಡುವರು.<br>ಮಕ್ಕಳು ನಿತ್ಯ ಜೀವನದ ಲೆಕ್ಕಗಳನ್ನು ಬಿಡಿಸುವರು |

**ಐದನೇ ತರಗತಿ**

| ಅವಧಿ | ಸಮಯ ಹಂತ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 1ನೇ ಅವಧಿ | 10 ನಿ / 30 ನಿ | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10 ನಿ / 30 ನಿ | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| 2ನೇ ಅವಧಿ | 10 ನಿ / 30 ನಿ | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10 ನಿ / 30 ನಿ | | | | | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಘಟಕ | ಸಾಮರ್ಥ್ಯ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಘಟಕ | ಸಾಮರ್ಥ್ಯ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಘಟಕ | ಸಾಮರ್ಥ್ಯ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 3ನೇ ಅವಧಿ | 10 ನಿ | ಜೀವನ ವಿಜ್ಞಾನ | – | – | ಶಿಕ್ಷಕರು | **ಪೂ. ಸಿ. ಚ :–** ಪಲ್ಲೆ ಬೇಕೆನ್ರಿ ಪಲ್ಲೆ ಹಾಡು ಹೇಳಿ ಕೊಡುವರು | ಜೀವನ ವಿಜ್ಞಾನ | ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದುವರು. | ಆರೋಗ್ಯಕರ ಅಭ್ಯಾಸಗಳನ್ನು ಒಳಗೊಂಡ ಚಿತ್ರಪಟಗಳು | ಶಿಕ್ಷಕರು | **ಪೂ. ಸಿ. ಚ :–** 1ನೇ ತರಗತಿಯವರೊಂದಿಗೆ ಹಾಡುವರು | ಕನ್ನಡ – ಮಲೆನಾಡ ಸಿರಿ : ಜಲಪಾತ | ಅಪರಿಚಿತ ಸನ್ನಿವೇಶಗಳನ್ನು ಸಂಭಾಷಣೆ, ಸಂವಾದ, ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವರು. | ಮೌಲ್ಯಮಾಪನ ಕಾರ್ಡ್‌ಗಳು | ಶಿಕ್ಷಕರು | **ಪೂ. ಸಿ. ಚ :–** ಮಕ್ಕಳಿಂದ ಮೌಖಿಕವಾಗಿ ಗುಣಿತಾಕ್ಷರ ಬಿಡಿಸುವ ಆಟ ಆಡಿಸುವರು. |
| | 30 ನಿ | | | | ಹಿರೇಮಣಿ | 2 ನೇ ತರಗತಿಯ ಮಕ್ಕಳ ಜೊತೆಯಲ್ಲಿ 1 ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. | | | | ಹಿರೇಮಣಿ | ಆರೋಗ್ಯಕರ ಅಭ್ಯಾಸಗಳ ಬಗ್ಗೆ ಕೆಲವು ವಾಕ್ಯಗಳನ್ನು ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆದು ಮಕ್ಕಳು ನಕಲು ಮಾಡಲು ಸೂಚಿಸುವರು. ಮಕ್ಕಳು ಕಪ್ಪು ಹಲಗೆಯ ಮೇಲೆ ಬರೆದ ವಾಕ್ಯಗಳನ್ನು ನಕಲು ಮಾಡಿ ಹಿರೇಮಣಿ ಸಹಾಯದಿಂದ ಓದುವರು.<br>ಉದಾ :– 1. ಪ್ರತಿ ದಿನ ವ್ಯಾಯಾಮ ಮಾಡುವುದು.<br>2. ಆಹಾರ ಸೇವಿಸುವ ಮುನ್ನ ಕೈ ತೊಳೆಯುವುದು.<br>3. ನಿಯಮಿತವಾಗಿ ಆಹಾರ ಸೇವನೆ ಮಾಡುವುದು.<br>(ಜೀವನ ವಿಜ್ಞಾನ (ಕೈಪಿಡಿ) ಪುಸ್ತಕ ಪುಟ ಸಂಖ್ಯೆ 15 ನ್ನು ಗಮನಿಸುವುದು.) | | | | ಶಿಕ್ಷಕರು | ಸಜಾತೀಯ, ವಿಜಾತೀಯ ಸಂಯುಕ್ತಾಕ್ಷರಗಳನ್ನು ಹಿಂದಿನ ತರಗತಿಯಲ್ಲಿ ಕಲಿಸಲಾಗಿದ್ದು, ಆ ಪದಗಳ ಬಗ್ಗೆ ಮಕ್ಕಳ ಮೌಲ್ಯ ಮಾಪನ ಮಾಡುವರು.<br>'ಮಲೆನಾಡ ಸಿರಿ ಜಲಪಾತ' ಇಡೀ ಪಠ್ಯ ಭಾಗವನ್ನು ಮಕ್ಕಳಿಂದ ಐದೈದು ಸಾಲುಗಳಂತೆ ಓದಿಸುವರು. ಮಾದರಿ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನು ಹಾಕಿಸುವರು. |
| | 10 ನಿ | ಸಾ.ಉ.ಉ.ಕಾ. | – | – | ಶಿಕ್ಷಕರು | | ಸಾ.ಉ.ಉ.ಕಾ. | ಆಕೃತಿಗಳ ಆಕಾರ ಹಾಗು ಜೋಡಣಾ ವಿಧಾನವನ್ನು ಅರಿಯುವರು. | ಆಕೃತಿಗಳ ಮಿಂಚು ಪಟ್ಟಿಗಳು, ಗೋಂದು, ಬೆಂಕಿ ಕಡ್ಡಿಗಳು | ಶಿಕ್ಷಕರು | ಬೆಂಕಿ ಕಡ್ಡಿಗಳಿಂದ ಆಕೃತಿಗಳನ್ನು ರಟ್ಟಿನ ಮೇಲೆ ಅಂಟಿಸುವುದನ್ನು ತೋರಿಸುವರು. ಮಕ್ಕಳಿಗೆ ತಾವೇ ಮಾಡಲು ಸೂಚಿಸುವರು. | ವಿಜ್ಞಾನ, ಎರಡ ಘಟ ಸ್ಮಾರಕಗಳಲ್ಲಿ ಸ್ನ [illegible] | ಎರಡು ಮೂರು ಸ್ಮಾರಕಗಳಲ್ಲಿನ ಸ್ವರೂಪ [illegible] ಬಗ್ಗೆ ತಿಳಿಯುವರು. | – | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. |
| | 30 ನಿ | | | | ಹಿರೇಮಣಿ | 2 ನೇ ತರಗತಿಯ ಮಕ್ಕಳ ಜೊತೆಯಲ್ಲಿ 1 ನೇ ತರಗತಿಯ ಮಕ್ಕಳು ಭಾಗವಹಿಸುವರು. | | | | ಹಿರೇಮಣಿ | ಮಕ್ಕಳು ಹಿರೇಮಣಿಯ ಸಹಾಯದಿಂದ ಚಟುವಟಿಕೆಯಲ್ಲಿ ಭಾಗವಹಿಸುವರು.<br>ಉದಾ :–  ಇತ್ಯಾದಿ | | | | ಶಿಕ್ಷಕರು | ಶಿಕ್ಷಕರು ಪಠ್ಯ ಪುಸ್ತಕದ ಅಭ್ಯಾಸದ ಪ್ರಶ್ನೆಗಳಿಗೆ ಉತ್ತರ ಹೇಳಿಸಿ, ನಕಲು ಮಾಡಿಸುವರು. |
| 4ನೇ ಅವಧಿ | 10 ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆಯನ್ನು ಗುರುತಿಸುವರು. | ಪೌಷ್ಟಿಕ ಆಹಾರದ ಚಿತ್ರ ಪಟ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–** "ಬೀಸೋದು ಬಿಗಿಬಾಳ, ಕುಟ್ಟೋದು ಖುಷಿಬಾಳ" ಎಂಬ ಹಾಡನ್ನು ಹೇಳಿಕೊಡುವರು.<br>ಮುಂದಿನ ಚಟುವಟಿಕೆಗೆ ಶಿಕ್ಷಕರು ಸೂಚನೆಯನ್ನು ನೀಡುವರು. | ಪರಿಸರ ಅಧ್ಯಯನ – ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಹಾಡು, ಕಾಲಿನ ಚಿತ್ರ ರಚನೆ | ಶಿಕ್ಷಕರು | **ಪೂ. ಸಿ. ಚ :–** ಬೀಸೋದು ಬಿಗಿಬಾಳ, ಕುಟ್ಟೋದು ಖುಷಿಬಾಳ ಎಂಬ ಹಾಡನ್ನು ಹೇಳಿಕೊಡುವರು. | ಸಮಾಜ ವಿಜ್ಞಾನ – ಸಾರ್ವಜನಿಕ ಆಸ್ತಿ | ಸಾರ್ವಜನಿಕ ಆಸ್ತಿಗಳ ಬಗ್ಗೆ ತಿಳಿಯುವರು. | ಐತಿಹಾಸಿಕ ಚಿತ್ರಗಳು ವಸ್ತುಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಿದ ವಿಷಯಗಳನ್ನು ಪುನರಾವರ್ತಿಸುವರು. |
| | 30 ನಿ | | | | ಹಿರೇಮಣಿ | ತೆರೆದಿಟ್ಟ ಆಹಾರವನ್ನು ತಿನ್ನುವುದರಿಂದ ಹಾಗೂ ತೆರೆದಿಟ್ಟ ನೀರನ್ನು ಕುಡಿಯುವುದರಿಂದ ಆಗುವ ತೊಂದರೆಗಳನ್ನು ಹೇಳಿ ಅನಾನುಕೂಲತೆಗಳನ್ನು ಅರ್ಥೈಸುವರು.<br>ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. | | | | ಹಿರೇಮಣಿ | ಶಿಕ್ಷಕರು ಹಿರೇಮಣಿ ಸಹಾಯದಿಂದ ದೇಹದ ಚಿತ್ರವನ್ನು ಬರೆಯಲು ತಿಳಿಸುವರು. ಹಾಗೆಯೇ ದೇಹದ ಭಾಗಗಳನ್ನು ಗುರುತಿಸುವರು. ಮಕ್ಕಳು ಚಿತ್ರ ರಚನೆಯಲ್ಲಿ ತೊಡಗುವರು. | | | | ಶಿಕ್ಷಕರು | ಐತಿಹಾಸಿಕ ಸ್ಮಾರಕಗಳು ಕೋಟೆ ಕೊತ್ತಲಗಳು ಹೇಗೆ ಸಾರ್ವಜನಿಕ ಆಸ್ತಿಯಾಗುತ್ತದೆ ಎಂಬುದನ್ನು ವಿವರಿಸುವರು.<br>ಸಂಗ್ರಹಿತ ಐತಿಹಾಸಿಕ ವಸ್ತುಗಳನ್ನು, ಚಿತ್ರಗಳನ್ನು ಮಕ್ಕಳಿಗೆ ಪ್ರದರ್ಶಿಸಿ ಅವುಗಳ ಮೌಲ್ಯವನ್ನು ತಿಳಿಸುವರು. |
| | 10 ನಿ | ಸಾ.ಉ.ಉ.ಕಾ. | ಆಕೃತಿಗಳ ರಚನೆ | ಬೆಂಕಿ ಕಡ್ಡಿಗಳು | ಶಿಕ್ಷಕರು | ಬೆಂಕಿ ಕಡ್ಡಿಗಳಿಂದ ವಿವಿಧ ಆಕೃತಿ ರಚನೆಯನ್ನು ಮುಂದುವರಿಸಲು ಸೂಚಿಸುವರು. | | | | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. | ಜೀವನ ವಿಜ್ಞಾನ | ಆರೋಗ್ಯಕ್ಕೆ ಹಾನಿಯಾಗುವುದನ್ನು ತಪ್ಪಿಸಲಿಕ್ಕಾಗಿ ಪ್ರಥಮ ಚಿಕಿತ್ಸೆ ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ಅರಿವನ್ನು ಮೂಡಿಸುವುದು. | ಪ್ರಥಮ ಚಿಕಿತ್ಸೆ, ಸುಟ್ಟ ಗಾಯಗಳ ಚಿತ್ರಪಟ | ಶಿಕ್ಷಕರು | ಶಿಕ್ಷಕರು ಚಿತ್ರಪಟಗಳನ್ನು ಗಮನಿಸಲು ಸೂಚನೆಗಳನ್ನು ನೀಡುವರು.<br>1. ಸುಟ್ಟ ಗಾಯಗಳ ಬಗ್ಗೆ<br>2. ನೀರಿನ ಅಪಘಾತಗಳ ಬಗ್ಗೆ |
| | 30 ನಿ | | | | ಹಿರೇಮಣಿ | ಮಕ್ಕಳು ಆಯುತ, ಚೌಕ, ತ್ರಿಭುಜ ಈ ಆಕೃತಿಗಳನ್ನು ಬೆಂಕಿ ಕಡ್ಡಿಗಳಿಂದ ರಚಿಸುವರು. | | | | ಶಿಕ್ಷಕರು | ಶಿಕ್ಷಕರು ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ಕೈ ಮತ್ತು ಕಾಲಿನ ಭಾಗಗಳನ್ನು ಮುಟ್ಟಿ ಹೇಳಿಸುವರು. | | | | ಹಿರೇಮಣಿ | ಹಲವಾರು ಚಿತ್ರಪಟಗಳನ್ನು ಅಥವಾ ನಿದರ್ಶನಗಳ ಮೂಲಕ ಮಕ್ಕಳಲ್ಲಿ ಅರಿವನ್ನುಂಟು ಮಾಡುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10 ನಿ | ಕನ್ನಡ – ಪದ ಓದು ಅಕ್ಷರ ಕಲಿ ಹಂತ – 2, 3, 4 | ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವುದು. ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು. | ಪ್ರಾಸ ಗೀತೆ, ಮಿಂಚು ಪಟ್ಟಿಗಳು, ಪದಗಳ ಸಂಗ್ರಹ ಪಟ್ಟಿ | ಶಿಕ್ಷಕರು | **ಪೂ. ಸಿ. ಚ :–** ಶಿಕ್ಷಕರು ಪಠ್ಯ ಪುಸ್ತಕದ 'ಹಿಮಮಣಿ" ವಿಭಾಗದಲ್ಲಿರುವ ಪುಟ್ಟ ಪ್ರಾಸಗೀತೆಗಳನ್ನು ಹೇಳಿಕೊಡುವರು. "ಅಲ್ಲೊಂದು ಅರಮನೆ ಅಹಾಹಾ ! ಪುಟ್ಟ ಅರಗಳಿ ಆಹಹಾ" ಈ ಗೀತೆಯನ್ನು ಹಾಡಿಸುವರು. | ಕನ್ನಡ – ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು. | ಪ್ರಾಸ ಗೀತೆ, ಅಭ್ಯಾಸ ಪುಸ್ತಕ | ಶಿಕ್ಷಕರು | **ಪೂ. ಸಿ. ಚ :–** 1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. ಹಾಡುಗಳನ್ನು ಹಾಡುವರು. | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಹಿರೇಮಣಿ | ಅಕ್ಷರಗಳ ಮಿಂಚು ಪಟ್ಟಿಗಳನ್ನು ಓದಿ, ಗುರುತಿಸಿ ಪದಗಳನ್ನು ರಚಿಸುವಂತೆ ಸೂಚಿಸುವರು. ಮಕ್ಕಳು ಮಿಂಚುಪಟ್ಟಿಗಳನ್ನು ಜೋಡಿಸಿ ಪದ ಮಾಡುವರು.<br>ಪದಗಳ ಸಂಗ್ರಹ ಪಟ್ಟಿಯನ್ನು ಹಿರೇಮಣಿಯು ಓದಿಸುವರು.<br>ಉದಾ :– ಪರ, ಯಮ, ಉಮ, ಟಪಟಪ ಇತ್ಯಾದಿ. | | | | ಶಿಕ್ಷಕರು | "ಹಾವಿನ ಹಾಡು" ಪದ್ಯವನ್ನು ಪೂರ್ತಿಯಾಗಿ ಹೇಳಿಕೊಡುವರು. ಮಕ್ಕಳಿಂದ ಸಾಮೂಹಿಕವಾಗಿ ಹಾಡಿಸುವರು.<br>ಹೊಸ ಪದಗಳನ್ನು ಕಪ್ಪು ಹಲಗೆಯಲ್ಲಿ ಬರೆಯುವರು. ಅವುಗಳಿಗೆ ಅರ್ಥ ವಿವರಣೆ ನೀಡುವರು.<br>ಉದಾ :–ಬಿಲ = ರಂಧ್ರ, ತೂತು.<br>ಠಾವೆ = ವಾಸಸ್ಥಳ<br>ಈವೆ = ಕೊಡುವೆ | | | | | |
| | 10 ನಿ | | | ಪದಗಳ ಸಂಗ್ರಹ ಪಟ್ಟಿ | ಶಿಕ್ಷಕರು | ಮಕ್ಕಳ ಕಾರ್ಯವನ್ನು ಪರಿಶೀಲನೆ ಮಾಡುವರು. | | | ಪ್ರಾಸ ಪದಗಳ ಪಟ್ಟಿ | ಶಿಕ್ಷಕರು | ಮುಂದಿನ ಚಟುವಟಿಕೆಗಳ ಬಗ್ಗೆ ಹಿರೆಮಣಿಗೆ ಕಂಠಪಾಠ ಮಾಡಲು ನಿರ್ದೇಶನಗಳನ್ನು ನೀಡುವರು. | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಶಿಕ್ಷಕರು | ಪಠ್ಯ ಪುಸ್ತಕದಲ್ಲಿ ಮಕ್ಕಳು ಬರೆದಿರುವ ಅಕ್ಷರಗಳನ್ನು ಮೌಲ್ಯ ಮಾಪನ ಮಾಡುವರು. ಹಿಂದುಳಿದ ಮಕ್ಕಳನ್ನು ಗುರ್ತಿಸಿ ತಿದ್ದುವರು.<br>ಕೈ ಬರಹಗಳನ್ನು ತಿದ್ದಿ ಅಕ್ಷರ ಅಂದವಾಗಿ ಬರೆಯುವ ವಿಧಾನಗಳನ್ನು ತಿಳಿಸಿ ಕೊಡುವರು.<br>ಉದಾ :– ಪ ಯ ಉ ಡ ಇತ್ಯಾದಿ. | | | | ಹಿರೇಮಣಿ | ಪದ್ಯವನ್ನು ಪೂರ್ತಿಯಾಗಿ ಬಾಯಿಪಾಠ ಮಾಡುವರು.<br>ಹಾವೆ – ಹೂವೆ, ಹೊಳಹಿನ, ಹೊಂದಲೆ ಇತ್ಯಾದಿ ಪದಗಳಲ್ಲಿ 'ಹ' ಕಾರ ಉಚ್ಚಾರಣೆ ಅಭ್ಯಾಸ ಮಾಡುವರು.<br>ಪ್ರಾಸ ಪದಗಳ ಪಟ್ಟಿಯಲ್ಲಿ ಪ್ರಾಸ ಪದಗಳನ್ನು ಓದುವರು. (ಹಾವೆ – ಹೂವೆ – ಠಾವೆ) ಇತ್ಯಾದಿ. | | | | | |
| 2ನೇ ಅವಧಿ | 10 ನಿ | ಗಣಿತ – ಸಂಕಲನ | ಮೊತ್ತ 9 ಕ್ಕೆ ಮೀರದಂತೆ + ಮತ್ತು = ಚಿಹ್ನೆ ಬಳಸಿ ಸಂಕಲನ ಮಾಡುವರು. | ಸ್ಥಳೀಯವಾಗಿ ಲಭ್ಯ ಸಾಮಗ್ರಿಗಳು | ಶಿಕ್ಷಕರು | **ಪೂರ್ವ ಸಿದ್ದತಾ ಚಟುವಟಿಕೆ :–** ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟ ಹಾಡನ್ನು ಪುನರಾವರ್ತಿಸುವರು.<br>ಶಿಕ್ಷಕರು ಮಕ್ಕಳಿಗೆ ಸಂಕಲನ ಮಾಡಲು ಸೂಚನೆಗಳನ್ನು ನೀಡುವರು. | ಗಣಿತ – ಸಂಕಲನ | ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಡ್ರಾಯಿಂಗ್ ಹಾಳೆ | ಶಿಕ್ಷಕರು | ಪೂರ್ವ ಸಿದ್ದತಾ ಚಟುವಟಿಕೆ :–1ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಹಿರೇಮಣಿ | ಮಕ್ಕಳಿಗೆ ವಸ್ತುಗಳನ್ನು ಕೊಟ್ಟು ಸಂಕಲನ ಮಾಡಲು ಸೂಚಿಸುವರು.<br>ಉದಾ :– 0000 00 000000<br>4 + 2 = 6 | | | | ಶಿಕ್ಷಕರು | ಶಿಕ್ಷಕರು ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 90 ರ ಸರಳ ಚಟುವಟಿಕೆಯನ್ನು ಡ್ರಾಯಿಂಗ್ ಹಾಳೆಯ ಮೇಲೆ ಬರೆದು ಸಂಕಲನ ಮಾಡಿಸುವರು.<br>ಮಕ್ಕಳು ಶಿಕ್ಷಕರೊಡನೆ ಸೇರಿ ಸಂಕಲನ ಮಾಡುವರು. | | | | | |
| | 10 ನಿ | | | ಚಿತ್ರಗಳು | ಶಿಕ್ಷಕರು | ಶಿಕ್ಷಕರು ಚಿತ್ರಗಳನ್ನು ಕೊಟ್ಟು ಎಣಿಸಿ ಸಂಕಲನ ಮಾಡಲು ಸೂಚಿಸುವರು | ಲಲಿತಕಲೆ | ರಾಗವಾಗಿ ಹಾಡುವ ಸಾಮರ್ಥ್ಯವನ್ನು ಹೊಂದುವುದು. | ಕಪ್ಪು ಹಲಗೆ, ರಾಷ್ಟ್ರಗೀತೆ ಇರುವ ಚಾರ್ಟ್ | ಶಿಕ್ಷಕರು | ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆದ ರಾಷ್ಟ್ರಗೀತೆಯನ್ನು ನಕಲು ಮಾಡಲು ಸೂಚಿಸುವರು. | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30 ನಿ | | | | ಹಿರೇಮಣಿ | ಮಕ್ಕಳು ಚಿತ್ರಗಳನ್ನು ಎಣಿಸಿ ಸಂಕಲನ ಮಾಡುವರು.<br>ಉದಾ : [000 0] [000]<br>4 + 3 = 7 | | | | ಶಿಕ್ಷಕರು | ಮಕ್ಕಳು ಹಿರೇಮಣಿಯ ಸಹಾಯ ದಿಂದ ನಕಲು ಮಾಡುವರು ಮತ್ತು ರಾಷ್ಟ್ರಗೀತೆಯನ್ನು ಅಭ್ಯಾಸ ಮಾಡುವರು. | | | | | |

**ಒಂದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 3ನೇ ಅವಧಿ | 10 ನಿ | ಜೀವನ ವಿಜ್ಞಾನ | – | – | ಶಿಕ್ಷಕರು | (2 ನೇ ತರಗತಿಯ ಮಕ್ಕಳ ಜೊತೆಯಲ್ಲಿ 1 ನೇ ತರಗತಿಯ ಮಕ್ಕಳು ಭಾಗವಹಿಸಿ ಆಲಿಸುವರು.) |
| | 30 ನಿ | | | | ಶಿಕ್ಷಕರು | ಎರಡನೇ ತರಗತಿಯ ಮಕ್ಕಳೊಂದಿಗೆ ಸೇರಿರುತ್ತಾರೆ. |
| | 10 ನಿ | ಜೀವನ ವಿಜ್ಞಾನ | – | – | ಶಿಕ್ಷಕರು | |
| | 30 ನಿ | | | | ಹಿರೇಮಣಿ | ಮೇಲಿನ ಅವಧಿಯ ಚಟುವಟಿಕೆ ಈ ಅವಧಿಗೂ ಮುಂದುವರಿಯುವುದು. |
| 4ನೇ ಅವಧಿ | | ಪರಿಸರ ಅಧ್ಯಯನ – ದೇಹದ ಸ್ವಚ್ಛತೆ | ದೇಹದ ಅಂಗಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಪ್ರಾಮುಖ್ಯತೆಯ ಅಭ್ಯಾಸ ಬೆಳೆಸಿಕೊಳ್ಳುವರು. | ಶಾಲೆಯ ಆವರಣ | ಶಿಕ್ಷಕರು | **ಪೂ. ಸಿ. ಚ :–**<br>"ಹಲ್ಲು ತಿಕ್ಕಬೇಕು ನಾವು ಹಲ್ಲು ತಿಕ್ಕಬೇಕು, ಹಲ್ಲನ್ನು ಉಜ್ಜಿ ಜಳಕವ ವಾಡಿ ಶುಭ್ರವಾದ ಬಟ್ಟೆ ತೊಡಬೇಕು" ಎಂಬ ಹಾಡನ್ನು ಹೇಳಿಕೊಡುವರು. |
| | 10 ನಿ | | | | ಶಿಕ್ಷಕರು | ಮಕ್ಕಳನ್ನು ಶಾಲೆಯ ಆಟದ ಮೈದಾನಕ್ಕೆ ಕರೆದುಕೊಂಡು ಹೋಗಿ ಶಾಲೆಯ ಆವರಣದಲ್ಲಿರುವ ಕಸ ಕಡ್ಡಿಗಳನ್ನು ತೆಗೆಸಿ ಸ್ವಚ್ಛಗೊಳಿಸುವರು. ಮಕ್ಕಳು ಭಾಗವಹಿಸಿದ ನಂತರ ಕೈ ಕಾಲುಗಳನ್ನು ತೊಳೆಯಲು ತಿಳಿಸುವರು. ನಂತರ ಅದರ ಬಗ್ಗೆ ಕೆಲವು ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>1. ನಾವು ಈಗ ಶಾಲೆಯ ಆವರಣವನ್ನು ಏನು ಮಾಡಿದೆವು ?<br>2. ನಾವು ಕೈ ಕಾಲುಗಳನ್ನು ಏಕೆ ತೊಳೆಯಬೇಕು ? |
| | 30 ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆಯನ್ನು ಗ್ರಹಿಸುವರು. | – | ಶಿಕ್ಷಕರು | ಮುಂದಿನ ಚಟುವಟಿಕೆಗೆ ಸೂಚನೆಯನ್ನು ನೀಡುವರು. |
| | 10 ನಿ | | | | ಹಿರೇಮಣಿ | ಮುಂದಿನ ಚಟುವಟಿಕೆ ಚಿತ್ರಕ್ಕೆ ಬಣ್ಣ ತುಂಬುವಂತೆ ಸೂಚನೆಯನ್ನು ನೀಡುವರು<br>ಪಠ್ಯ ಪುಸ್ತಕದ ಪುಟ ಸಂಖ್ಯೆ 32 ರಲ್ಲಿ ಇರುವ ಹಣ್ಣಿನ ಚಿತ್ರಗಳಿಗೆ ಸೂಕ್ತವಾದ ಬಣ್ಣವನ್ನು ತುಂಬಲು ತಿಳಿಸುವರು.<br>(ಹಿರೇಮಣಿಯು ಎಲ್ಲಾ ಮಕ್ಕಳಿಗೂ ಸೂಕ್ತವಾದ ಬಣ್ಣ ಹಚ್ಚಲು ಮಾರ್ಗದರ್ಶನ ಮಾಡುವರು.) |

**ಎರಡನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 3ನೇ ಅವಧಿ | 10 ನಿ | ಜೀವನ ವಿಜ್ಞಾನ | ಉತಮ ಆಹಾರದ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದುವುದು. | ಹಾಡು, ಜೀವನ ವಿಜ್ಞಾನ ಪುಸಕ, ಒಳ್ಳೆಯ ಆಹಾರ ಅಭ್ಯಾಸದ ಚಿತ್ರಪಟಗಳು | ಶಿಕ್ಷಕರು | **ಪೂ. ಸಿ. ಚ :–**<br>5 ನೇ ತರಗತಿಯ ಮಕ್ಕಳೊಂದಿಗೆ ಅಭಿನಯ ಗೀತೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | ಶಿಕ್ಷಕರು | ಉತ್ತಮ ಆಹಾರದ ಅಭ್ಯಾಸಗಳ ಕೆಲವು ವಾಕ್ಯಗಳನ್ನು ಕಪ್ಪು ಹಲಗೆಯ ಮೇಲೆ ಶಿಕ್ಷಕರು ಬರೆದು ನಕಲು ಮಾಡಲು ಸೂಚಿಸುವರು ನಂತರ ವಿವರಗಳನ್ನು ನೀಡುವರು.<br>ಉದಾ :–1. ದಿನಕ್ಕೆ 2 ಊಟ ಹಾಗೂ 1 ಉಪಹಾರ ಸೇವನೆ ಸೂಕ್ತ.<br>2. ನಿಗದಿತ ಸಮಯಕ್ಕೆ ಸರಿಯಾಗಿ ಆಹಾರ ಅಭ್ಯಾಸಗಳನ್ನು ಇಟ್ಟುಕೊಳ್ಳಬೇಕು.<br>3. ಅತಿ ಬಿಸಿಯಾದ ಆಹಾರ, ಅತಿ ತಂಪಾದ ಆಹಾರ ಮತ್ತು ಹಳಸಿದ ಆಹಾರ ಸೇವನೆ ಒಳ್ಳೆಯದಲ್ಲ.<br>ಸೂಚನೆ :– (ಜೀವನ ವಿಜ್ಞಾನ ಕೈಪಿಡಿ ಪುಸ್ತಕದ ಪುಟ ಸಂಖ್ಯೆ 19 ರಲ್ಲಿ ಇದ್ದಂತೆ ಶಿಕ್ಷಕರು ನಿರ್ವಹಿಸುವರು.) |
| | 10 ನಿ | ಜೀವನ ವಿಜ್ಞಾನ | – | – | ಶಿಕ್ಷಕರು | ಮೇಲಿನ ಅವಧಿಯ ಚಟುವಟಿಕೆ ಈ ಅವಧಿಗೂ ಮುಂದುವರಿಯುವುದು. |
| | 30 ನಿ | | | | ಹಿರೇಮಣಿ | |
| 4ನೇ ಅವಧಿ | | ಪರಿಸರ ಅಧ್ಯಯನ – ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಹಾಡು, ಸರಳ ಚಟುವಟಿಕೆಗಳು | ಶಿಕ್ಷಕರು | **ಪೂ. ಸಿ. ಚ :–**<br>1 ನೇ ತರಗತಿಯವರೊಂದಿಗೆ ಹಾಡುವರು. |
| | 10 ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ಓಡಲು, ನೆಗೆಯಲು, ಕುಪ್ಪಳಿಸಲು ಹಾರಲು ಕುಂಟಲು ತಿಳಿಸುವರು. ಅಥವಾ ಸೂಚನೆಯನ್ನು ನೀಡುವರು. ಹಿರೇಮಣಿಯ ಸಹಾಯದಿಂದ ಮೇಲಿನ ಎಲ್ಲಾ ಚಟುವಟಿಕೆಗಳನ್ನು ಮಾಡಲು ಸೂಚಿಸುವರು ಮಕ್ಕಳು ಚಟುವಟಿಕೆಗಳಲ್ಲಿ ಭಾಗವಹಿಸುವರು. |
| | 30 ನಿ | ಸಾ.ಉ.ಉ.ಕಾ. | ಬಣ್ಣದ ಕಾಗದದಿಂದ ಆಟಿಕೆ ತಯಾರಿಸುವ ಕೌಶಲವನ್ನು ಬೆಳೆಸುವುದು | ಬಣ್ಣದ ಕಾಗದ, ಕತ್ತರಿ | ಶಿಕ್ಷಕರು | **ಕಾಗದದಿಂದ ಹೂ ತಯಾರಿಕೆ ವಿಧಾನ :–**<br>1) ಆಯತಾಕಾರದ ಬಣ್ಣದ ಕಾಗದ ತೆಗೆದುಕೊಳ್ಳುವುದು.<br>2) ಸುರುಳಿಯಾಗಿ ಸುತ್ತುವುದು.<br>3) ಕತ್ತರಿಯಿಂದ ಸುರುಳಿಯನ್ನು ಕೊಳವೆ ಭಾಗಕ್ಕೆ ಹಾಕಿ 5,6 ಜಾಗದಲ್ಲಿ ಕತ್ತರಿಸುವುದು.<br>4) ಮೇಲ್ಭಾಗದ ಬಣ್ಣದ ಹಾಳೆಯನ್ನು ನಿಧಾನವಾಗಿ ಎಳೆಯಿರಿ.<br>5) ಕೆಳಭಾಗವನ್ನು ಬಿಗಿಯಾಗಿ ಮಾರ್ಪಡಿಸಿ.<br>6) ಅಲಂಕಾರದ ಹೂ ತಯಾರಾಗುತ್ತದೆ. |
| | 10 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಮಕ್ಕಳು ಕಾಗದದಿಂದ ಹೂ ತಯಾರಿಸುವರು.<br>**ಸೂಚನೆ :–** 1) ಬಣ್ಣ ಬಣ್ಣದ ಕಾಗದ ಬಳಸಿದರೆ ಉತ್ತಮ<br>2) ಶಿಕ್ಷಕರು ಹಿರೇಮಣಿಗೆ ಸೂಕ್ತ ಮಾರ್ಗದರ್ಶನ ನೀಡುವರು. |

**ಐದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 3ನೇ ಅವಧಿ | 10 ನಿ | ಕನ್ನಡ – ನಮ್ಮ ಕನಸು' | ಸರಳ ಹಾಗೂ ಗೊತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದು. ಪದ್ಯದಲ್ಲಿ ಹೇಳಲಾದ ವಿಚಾರಗಳನ್ನು ತಾರ್ಕಿಕವಾಗಿ ಚರ್ಚಿಸಿ ತೀರ್ಮಾನಿಸುವುದು. | ಗ್ರಂಥಾಲಯ ಪುಸ್ತಕಗಳು | ಶಿಕ್ಷಕರು | **ಪೂ. ಸಿ. ಚ :–**<br>"ನಾವೆಲ್ಲ ಪುಷ್ಪಗಳು ಪರಿಮಳವ ಬೀರುವುವು" ಎಂಬ ಗೀತೆಯನ್ನು ಹಾಡುವರು.<br>ಮಕ್ಕಳಿಗೆ ಸೂಚನೆ ನೀಡುವರು. |
| | 30 ನಿ | | | | ಹಿರೇಮಣಿ | ಗ್ರಂಥಾಲಯದಲ್ಲಿರುವ ಮಕ್ಕಳ ಕಥೆಗಳು ಶಿಶುಗೀತೆಗಳ ಪುಸ್ತಕಗಳನ್ನು ಮಕ್ಕಳು ಪಡೆದು ಮೌನವಾಗಿ ಓದುವರು. |
| | 10 ನಿ | ಮೌಲ್ಯ ಶಿಕ್ಷಣ | ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳ ಬಗ್ಗೆ ಗೌರವವನ್ನು ಸೂಚಿಸುವುದು. | ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜದ ಚಿತ್ರ, ಬಣ್ಣಗಳು | ಶಿಕ್ಷಕರು | ಶಿಕ್ಷಕರು ರಾಷ್ಟ್ರಗೀತೆ ಬರೆಯಲು ಅಗತ್ಯ ಸೂಚನೆಗಳನ್ನು ನೀಡುವರು. |
| | 30 ನಿ | | | | ಶಿಕ್ಷಕರು | 1. ಶಿಕ್ಷಕರು ರಾಷ್ಟ್ರಗೀತೆಯನ್ನು ಚಾರ್ಟ್‌ನ್ನು ಹಾಕಿ ಮಕ್ಕಳಿಗೆ ಬರೆದುಕೊಳ್ಳಲು ಸೂಚಿಸುವರು.<br>2. ರಾಷ್ಟ್ರಧ್ವಜದ ಚಿತ್ರವನ್ನು ಕಪ್ಪು ಹಲಗೆಯ ಮೇಲೆ ಬರೆದು ಅದನ್ನು ನೋಟ್ ಪುಸ್ತಕದಲ್ಲಿ ಬರೆದುಕೊಳ್ಳುವಂತೆ ಸೂಚನೆಯನ್ನು ನೀಡುವರು.<br>ಸೂಕ್ತ ಬಣ್ಣಗಳನ್ನು ಹಾಕಲು ಸೂಚಿಸುವರು. |
| 4ನೇ ಅವಧಿ | | ಸಮಾಜ ವಿಜ್ಞಾನ – ಸಾರ್ವಜನಿಕ ಆಸ್ತಿ | ಸಾರ್ವಜನಿಕ ಆಸ್ತಿಗಳ ಬಗ್ಗೆ ತಿಳಿಯುವುದು. | ಅಭ್ಯಾಸ ಪುಸ್ತಕ, ಪ್ರಶ್ನಾವಳಿ ಕಾರ್ಡ್‌ಗಳು | ಶಿಕ್ಷಕರು | ಮಕ್ಕಳನ್ನು ಅಭ್ಯಾಸಕ್ಕೆ ಅನುಕೂಲವಾಗುವಂತೆ ಗುಂಪುಗಳನ್ನಾಗಿ ವಿಂಗಡಿಸುವರು. |
| | 10 ನಿ | | | | ಹಿರೇಮಣಿ | ಶಿಕ್ಷಕರು ತಯಾರಿಸಿರುವ ಪ್ರಶ್ನೋತ್ತರಗಳಿಗೆ ಉತ್ತರ ಬರೆಯುವಂತೆ ಸೂಚಿಸುವರು.<br>ಮಕ್ಕಳು ಪ್ರಶ್ನೆಗಳಿಗೆ ಉತ್ತರ ಬರೆಯುವರು |
| | 30 ನಿ | ವಿಜ್ಞಾನ – ನೆಲ ಮತ್ತು ಜಲದಲ್ಲಿ ಸಸ್ಯ ಮತ್ತು ಪ್ರಾಣಿಗಳ ಜೀವನ | ಸಸ್ಯ ಮತ್ತು ಪ್ರಾಣಿಗಳು ತಮ್ಮ ಪರಿಸರಕ್ಕೆ ಹೊಂದಿಕೊಂಡಿವೆ ಎಂಬ ಅಂಶ ಅರಿಯುವುದು. ಸಸ್ಯ ಮತ್ತು ಪ್ರಾಣಿಗಳ ಹೊಂದಾಣಿಕೆ ಬಗ್ಗೆ ತಿಳಿಯುವರು. | ಭೂ ವಾಸಿ ಮತ್ತು ಜಲವಾಸಿ ಪ್ರಾಣಿಗಳ ಚಿತ್ರ. | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. |
| | 10 ನಿ | | | | ಶಿಕ್ಷಕರು | * ಶಿಲಾಗೋಳ, ಜಲಗೋಳ ಮತ್ತು ವಾಯುಗೋಳದ ಬಗ್ಗೆ ಚರ್ಚಿಸುವರು.<br>* ಚಿತ್ರಗಳನ್ನು ಬಳಸಿ ಭೂ ವಾಸಿ ಪ್ರಾಣಿಗಳು, ಸಸ್ಯಗಳು ಮತ್ತು ಜಲವಾಸಿ ಪ್ರಾಣಿಗಳು ಮತ್ತು ಸಸ್ಯಗಳ ವ್ಯತ್ಯಾಸದ ಬಗ್ಗೆ ಚರ್ಚೆ.<br>* ಸಸ್ಯ ಮತ್ತು ಪ್ರಾಣಿಗಳ ಪರಿಸರದ ಹೊಂದಾಣಿಕೆ ಬಗ್ಗೆ ಚರ್ಚೆ.<br>* ಸಸ್ಯ ಪ್ರಾಣಿಗಳ ಅವಲಂಬನೆ ಬಗ್ಗೆ ಉದಾಹರಣೆ ಮೂಲಕ ವಿವರಿಸುವರು. |

## ಒಂದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1ನೇ ಅವಧಿ | 40ನಿ | | | | – | – ಸಾಮೂಹಿಕ ಕವಾಯತು – |
| 2ನೇ ಅವಧಿ | 10ನಿ | ಕನ್ನಡ – ಪದ ಓದು ಅಕ್ಷರ ಕಲಿ ಹಂತ – 2, 3, 4 | ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವುದು. ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು. | ಪಠ್ಯ ಪುಸ್ತಕ, ಮೌಲ್ಯಮಾಪನ ಕಾರ್ಡ್‌ಗಳು | ಶಿಕ್ಷಕರು | ಪೂ. ಸಿ. ಚ :–<br>"ಇರುವೆ ಇರುವೆ ಇಲ್ಲಿರುವೆ ಸುಮ್ಮನೆ ಏಕೆ ಕುಳಿತಿರುವೆ" ಎಂಬ ಪ್ರಾಸ ಗೀತೆಯನ್ನು ಹಾಡಿಸುವರು. |
| | 30ನಿ | | | | ಶಿಕ್ಷಕರು | ಅಕ್ಷರ ಕಲಿಕೆಯ ಹಂತ – 3 ರ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವರು.<br>ಪ್ರತಿ ಮಗುವನ್ನು ಕರೆದು ವೈಯಕ್ತಿಕವಾಗಿ ಪಠ್ಯ ಪುಸ್ತಕದಲ್ಲಿ ಸೂಚಿಸಿದ ಪದ ಓದುವಂತೆ ತಿಳಿಸುವರು.<br>ಕಪ್ಪು ಹಲಗೆಯಲ್ಲಿ ಚಿತ್ರನೋಡಿ ಪದ ಬರೆಯಲು ತಿಳಿಸುವರು. |
| | 10ನಿ | | | ಮಾದರಿ ವಾಕ್ಯಗಳು | ಶಿಕ್ಷಕರು | ಅಚ್ಚಾದ ದಪ್ಪ ಅಕ್ಷರಗಳನ್ನು ಓದುವಂತೆ ಸೂಚಿಸುವರು ಮಕ್ಕಳಿಗೆ ಮಾರ್ಗದರ್ಶನ ನೀಡುವರು. |
| | 30ನಿ | | | | ಹಿರೇಮಣಿ | ಕಪ್ಪು ಹಲಗೆಯಲ್ಲಿ ಬರೆದ ವಾಕ್ಯಗಳನ್ನು ಹಿರೇಮಣಿಯು ಮಕ್ಕಳಿಗೆ ಸಾಮೂಹಿಕವಾಗಿ ಹೇಳಿಕೊಡುವರು.<br>ಅರಸ ರಪ ರಪ ಬಂದ<br>ಗಗನ ಜಗಜಗ<br>ಅರಸರ ದಸರ ಮಜ. |
| 3ನೇ ಅವಧಿ | 10ನಿ | ಸಾ.ಉ.ಉ.ಕಾ. | ವಿವಿಧ ರೀತಿಯ ಚಿತ್ರಗಳ ಪರಿಚಯ . | ಕತ್ತರಿಸಿದ ವಿವಿಧ ರೀತಿಯ ಚಿತ್ರಗಳು, ಗೋಂದು, ಡ್ರಾಯಿಂಗ್ ಶೀಟ್ ಅಥವಾ ರಟ್ಟು | ಹಿರೇಮಣಿ | ವಿವಿಧ ರೀತಿಯ ಚಿತ್ರಗಳನ್ನು ರಟ್ಟಿನ ಮೇಲೆ ಅಂಟಿಸಲು ಶಿಕ್ಷಕರು ಸೂಚಿಸುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯ ಸಹಾಯದಿಂದ ಮಕ್ಕಳು ಚಿತ್ರಗಳನ್ನು ಅಂಟಿಸುವ ಕೆಲಸ ಮಾಡುವರು.<br>ಉದಾ :– ಮೀನು, ಚಿಟ್ಟೆ, ಗಿಳಿ, ಕಾಗೆ, ಕಪ್ಪೆ ಇತ್ಯಾದಿ.<br>ಇಲ್ಲಿ ರಚಿಸಲಾದ ಚಿತ್ರಗಳ ಬಗ್ಗೆ ಅವುಗಳ ಹೆಸರು, ವಾಸ ಹಾಗು ಉಪಯೋಗಗಳನ್ನು ಹೇಳಲು ಶಿಕ್ಷಕರು ಸೂಚಿಸುವರು. |
| | 10ನಿ | ಲಲಿತ ಕಲೆ | – | – | ಹಿರೇಮಣಿ | ಎಲೆಗಳನ್ನು ಬಳಸಿ ಚಿತ್ರ ರಚಿಸುವುದನ್ನು ಹೇಳಿ ಕೊಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ಎಲೆಗಳಿಂದ ವಿವಿಧ ರೀತಿಯ ಚಿತ್ರಗಳನ್ನು ಮಾಡುವರು. |

## ಎರಡನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 1ನೇ ಅವಧಿ | 40ನಿ | | | | | – ಸಾಮೂಹಿಕ ಕವಾಯತು – |
| 2ನೇ ಅವಧಿ | 10ನಿ | ಕನ್ನಡ – ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು. | ಅಭ್ಯಾಸ ಪುಸ್ತಕ | ಶಿಕ್ಷಕರು | 1 ನೇ ತರಗತಿಯವರೊಂದಿಗೆ ಪ್ರಾಸಗೀತೆ ಹಾಡುವರು. |
| | 30ನಿ | | | | ಹಿರೇಮಣಿ | ಭಾಷಾಭ್ಯಾಸ ಚಟುವಟಿಕೆಗಳನ್ನು ಮಾಡಲು ಮಕ್ಕಳಿಗೆ ಸೂಚನೆಗಳನ್ನು ನೀಡುವರು.<br>'ಬ' ಮತ್ತು 'ಹ' ಗುಣಿತಾಕ್ಷರಗಳಿಂದ ಆರಂಭವಾಗುವ ಪದಗಳನ್ನು ಪಠ್ಯ ಪುಸ್ತಕದಿಂದ ಆಯ್ದು ಬರೆಯುವರು.<br>ಬ – ಬಾಗಿಲು – ಬಿಲ – ಬಂದನು – ಬರಿಮೈ.<br>ಹ – ಹಾವು – ಹೂವೂ – ಹೊಂದಲೆ – ಹೊಳಪು |
| | 10ನಿ | | | ಅಭ್ಯಾಸ ಪುಸ್ತಕ | ಶಿಕ್ಷಕರು | ಮಕ್ಕಳ ಬರವಣಿಗೆಯನ್ನು ಪರಿಶೀಲಿಸಿ ತಿದ್ದುವರು. |
| | 30ನಿ | | | | ಶಿಕ್ಷಕರು | ವೈಯಕ್ತಿಕವಾಗಿ ಮಕ್ಕಳಿಂದ "ಹಾವಿನ ಹಾಡು" ಪದ್ಯವನ್ನು ಹಾಡಿಸುವರು.<br>ಹಿಂದುಳಿದ ಮಕ್ಕಳಿಗೆ ಇನ್ನೂ ಹೆಚ್ಚಿನ ಅಭ್ಯಾಸ ಮಾಡಲು ತಿಳಿಸುವರು.<br>ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುವ ವಿಧಾನ ಹೇಳಿಕೊಟ್ಟು ಬರೆಸುವರು. |
| 3ನೇ ಅವಧಿ | 10ನಿ | ಗಣಿತ – ಸಂಕಲನ | ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ನಿತ್ಯ ಜೀವನದ ಸಮಸ್ಯೆಗಳ ಪಟ್ಟಿ, ಡ್ರಾಯಿಂಗ್ ಶೀಟ್‌ಗಳಲ್ಲಿ ಲೆಕ್ಕಗಳನ್ನು ಬರೆದ ಹಾಳೆಗಳು. | ಶಿಕ್ಷಕರು | ಮಕ್ಕಳನ್ನು ಗುಂಪುಗಳಲ್ಲಿ ಕೂಡಿಸಿ ಗುಂಪಿನ ನಾಯಕನಿಗೆ (ರಟ್ಟಿನ ಹಾಳೆಗಳ ಮೇಲೆ ಬರೆದ) ಸಮಸ್ಯೆಗಳನ್ನು ಬಿಡಿಸಲು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಗುಪುಗಳಲ್ಲಿ ಕುಳಿತು ಸಂಕಲನದ ಸಮಸ್ಯೆಗಳನ್ನು ಬಿಡಿಸುವರು |
| | 10ನಿ | ಪರಿಸರ ಅಧ್ಯಯನ – ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಹಾಡು, ಕಾಲುಗಳಿಂದ ಮಾಡುವ ಕೆಲಸಗಳ ಪಟ್ಟಿ | ಶಿಕ್ಷಕರು | |
| | 30ನಿ | | | | ಶಿಕ್ಷಕರು | ಕಾಲುಗಳಿಂದ ಆಗುವ ಕೆಲಸಗಳ ಬಗ್ಗೆ ತಿಳಿಸುವರು.<br>ಮತ್ತು ಕೈ ಮತ್ತು ಕಾಲುಗಳಿಂದ ಮಾಡುವ ಕೆಲವು ವ್ಯಾಯಾಮಗಳನ್ನು ತಿಳಿಸುವರು. |

## ಐದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 1ನೇ ಅವಧಿ | 40ನಿ | | | | | – ಸಾಮೂಹಿಕ ಕವಾಯತು – |
| 2ನೇ ಅವಧಿ | 10ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | | |
| | 10ನಿ | | | | | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | | |
| 3ನೇ ಅವಧಿ | 10ನಿ | ವಿಜ್ಞಾನ – ನೆಲ ಮತ್ತು ಜಲದಲ್ಲಿ ಸಸ್ಯ ಮತ್ತು ಪ್ರಾಣಿಗಳ ಜೀವನ | ಪುನರಾವರ್ತನೆ | ಚಿತ್ರಗಳು | ಶಿಕ್ಷಕರು | ಶಿಕ್ಷಕರು ಮಕ್ಕಳನ್ನು ಗುಂಪಿನಲ್ಲಿ ಕೂಡಿಸಿ ಸಸ್ಯಗಳು, ಪ್ರಾಣಿಗಳಿಗಿರುವ ವ್ಯತ್ಯಾಸವನ್ನು ಪಟ್ಟಿ ಮಾಡಲು ಸೂಚಿಸುವರು. |
| | 30ನಿ | | | | ಹಿರೇಮಣಿ | ಉದಾ :– ಮೀನು ಮತ್ತು ಗುಬ್ಬಿ /ಮೊಸಳೆ ಮತ್ತು ಹಸು / ಆನೆ ಮತ್ತು ತಿಮಿಂಗಿಲ/ ಇತ್ಯಾದಿ |
| | 10ನಿ | ಸಮಾಜ ವಿಜ್ಞಾನ – ಸೌರವ್ಯೂಹ | ಭೂಮಿಯು ಸೌರವ್ಯೂಹದ ಒಂದು ಗ್ರಹ ಎಂದು ತಿಳಿಯುವುದು.ಭೂಮಿಯ ಚಲನೆಯ ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು. | – | ಶಿಕ್ಷಕರು | ಸೌರ್ಯವ್ಯೂಹದ ಚಿತ್ರ ಬರೆಯಲು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಸೌರ್ಯವ್ಯೂಹದ ಚಿತ್ರವನ್ನು ಬರೆದು ಗ್ರಹಗಳನ್ನು ಗುರ್ತಿಸಿ ಬಣ್ಣ ಹಚ್ಚುವರು. |